## ಶ್ರೀ ವೈಕುಂಠ ವಾರ್ತಾ

ಆಧ್ಯಾತ್ಮಿಕ– ಶೈಕ್ಷಣಿಕ–ಮಾಸ ಪತ್ರಿಕೆ

ಸಂಪುಟ : 22 | ಸಂಚಿಕೆ : 01
ಮಂಡ್ಯ | ಏಪ್ರಿಲ್ 2022
ಪುಟಗಳು : 20

ಗೌರವ ಸಂಪಾದಕರು :
**ಕೆ. ಎನ್. ರವಿ**

ಪ್ರಕಾಶಕರು ಮತ್ತು ಸಂಪಾದಕರು :
**ಶಿವಮೂರ್ತಿ ಕೀಲಾರ**
ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್

ಮುದ್ರಕರು :
ಶಿವಪ್ರಕಾಶ್, ಐಡಿಯಲ್ ಆಫ್‌ಸೆಟ್ ಪ್ರಿಂಟರ್ಸ್ ಮಂಡ್ಯ

**ವಾರ್ಷಿಕ ಚಂದಾ ವಿವರ: 150 ರೂಪಾಯಿಗಳು**

ವಿಳಾಸ
ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್
5ನೇ ಕ್ರಾಸ್, ಶಂಕರನಗರ, ಮಂಡ್ಯ


### –: ಪ ರಿ ವಿ ಡಿ :–


| ಲೇಖನಗಳು | ಪುಟ ಸಂಖ್ಯೆ |
|---|---|
| 1 ಶ್ರೀನಿವಾಸ ಕಲ್ಯಾಣ–ವೆಂಕಟಾದ್ರಿ ಮಹಿಮೆ | 2 |
| 2 Anantha Army Training Academy | 5 |
| 3 ನೀತಿ ಶಾಸ್ತ್ರದಲ್ಲಿ ಯುದ್ಧ ನೀತಿ | 7 |
| 4 ಗಣಿತದೊಳಗಿನ ಆಧ್ಯಾತ್ಮಿಕತೆ | 8 |
| 5 ಗಣೇಶನ ಹಾಡು | 8 |
| 6 ಗುರು ಭಕ್ತಿ | 9 |
| 7 ದಂಪತಿಗಳ ಕಲಾ ಪಯಣ | 13 |
| 7 ಮಾತೃದೇವೂಭವಃ –ತಾಯಿ ದೇವರ ಕಥೆ | 12 |
| 8 ಶಿಕ್ಷಕನಾಗಿ, ಸಂಸ್ಥೆಯ ಬಗ್ಗೆ ಅನಿಸಿಕೆಗಳು | 13 |
| 9 ವಿದಾಯ | 14 |
| 10 ಬದುಕು ಜಟಕಾ ಬಂಡಿ | 15 |
| 11 ಯುಗಾದಿ ಸಂಭ್ರಮ | 16 |


# ಸಂಪಾದಕೀಯ

## ಗ್ರಾಮೀಣ ಯುವಕರಿಗೆ ಸೇನಾ ಪೂರ್ವ ತರಬೇತಿ ಅಭಿನವ ಭಾರತಿ ಕೇಂದ್ರದ ಹೊಸ ಮೈಲುಗಲ್ಲು

ಅಭಿನವ ಭಾರತಿ ವಿದ್ಯಾ ಸಂಸ್ಥೆ ಹೊಸ ದೃಷ್ಟಿ, ಹೊಸ ದಾರಿಯಲ್ಲಿ ಹೆಜ್ಜೆ ಹಾಕಲು ಬಯಸಿದೆ. ಶಿಕ್ಷಣ ಮತ್ತು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮಾತ್ರ ಹೆಚ್ಚು ಪ್ರಕರವಾಗಿ ಬೆಳೆದಿದೆ. ಈಗ ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೂಡಲದೊಡ್ಡಿಯಲ್ಲಿ ಸೈನ್ಯ ಸೇರುವ ಯುವಕರಿಗೆ ಮತ್ತು ಯುವತಿಯರಿಗಾಗಿ ವಿಶೇಷ ತರಬೇತಿ, ಮಾಹಿತಿ, ಮಾರ್ಗದರ್ಶನ ನೀಡುವ ಕೇಂದ್ರವೊಂದನ್ನು ಸ್ಥಾಪನೆ ಮಾಡಲು ಸಿದ್ಧತೆ ಮಾಡಲಾಗಿದೆ.

ಮಂಡ್ಯದ ಗ್ರಾಮೀಣ ಪ್ರದೇಶದ ಯುವಕರು ಭಾರತೀಯ ಸೇನೆ ಸೇರಲು ವಿಶೇಷ ತರಬೇತಿಯ ಮೂಲಕ ಉದ್ಯೋಗದ ಭರವಸೆ ನೀಡುವ ಹೊಸ ಆಶಾಕಿರಣವೊಂದು ಯುವಕರಿಗೆ ಸಿಗಲಿದೆ. ಅಭಿನವ ಭಾರತಿ ಶಿಕ್ಷಣ ಸಂಸ್ಥೆ ಹಾಗೂ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕರಾಗಿದ್ದ ಶ್ರೀ ಅನಂತ ಕುಮಾರ ಸ್ವಾಮೀಜಿಯವರ ಸ್ಮರಣೆಯಲ್ಲಿ ಅನಂತ ಸೇನಾ ಪೂರ್ವ ತರಬೇತಿ ಕೇಂದ್ರವನ್ನು ಆರಂಭಿಸಲು ನಿಶ್ಚಯಿಸಲಾಗಿದೆ. ಮದ್ದೂರು ತಾಲ್ಲೂಕು ಮೂಡಲದೊಡ್ಡಿ ಅಭಿನವ ಭಾರತಿ ಸಂಸ್ಥೆಯ ಆವರಣದಲ್ಲಿ ಜೂನ್ ಮೊದಲ ವಾರ ಕಾರ್ಯಾರಂಭ ಮಾಡಲಾಗಿದೆ. ಅಭಿನವ ಭಾರತಿ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ, ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರು ಆದ ಶ್ರೀ ಶಿವಮೂರ್ತಿ ಕೀಲಾರರವರ ಸಾರಥ್ಯದಲ್ಲಿ ಭೂಸೇನೆ, ನೌಕಾಸೇನೆ, ವಾಯುಸೇನೆ, ಬಿಎಸ್‌ಎಫ್ ಸೇರುವ ಅಭ್ಯರ್ಥಿಗಳಿಗೆ ಪೂರ್ವ ಸಿದ್ಧತೆ ತರಬೇತಿಗಳನ್ನು ನೀಡಿ ಸೇನಾ ಪರೀಕ್ಷೆಗಳಿಗೆ ಸನ್ನದುಗೊಳಿಸುವುದು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಓದಿರುವ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟು ಕೊಂಡು ಸ್ಪರ್ಧಾತ್ಮಕ ಹಾಗೂ ಸೇನಾ ಪರೀಕ್ಷೆಗಳನ್ನು ಎದುರಿಸಲು ಕ್ರಮ, ಯಶಸ್ಸಿನ ಗುಟ್ಟಿನ ಬಗ್ಗೆ ಸಮಗ್ರ ಮಾಹಿತಿ ಕೊಡುವ ಚಿಂತನೆ ಕೇಂದ್ರದ್ದಾಗಿದೆ.

ಮಾಜಿ ಸೈನಿಕರು, ಕ್ರೀಡಾಪಟುಗಳು, ಸ್ವಾಮೀಜಿಗಳು, ಸಂಸ್ಥೆಯ ಈ ಕಾರ್ಯಕ್ಕೆ ಸಾಥ್ ನೀಡಲು ಭರವಸೆ ನೀಡಿದ್ದಾರೆ.

ಹಳೇ ಮೈಸೂರು ವಿಭಾಗದ ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ರಾಮನಗರ, ತುಮಕೂರು ಸೇರಿದಂತೆ ಇತರ ಜಿಲ್ಲೆಗಳ ಗ್ರಾಮೀಣ ಭಾಗದ ನಿರುದ್ಯೋಗಿಗಳನ್ನು ಗಮನದಲ್ಲಿಟ್ಟುಕೊಂಡು ಈ ಕೇಂದ್ರ ಆರಂಭಿಸಲಾಗಿದೆ.

ಈ ಕೇಂದ್ರ ಲಾಭದಾಯಕ ಉದ್ಯಮ ಅಲ್ಲ. ವಾಣಿಜ್ಯ ಕೇಂದ್ರವಲ್ಲ. ಸಾಮಾಜಿಕ ಸೇವೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಿರ್ವಹಣೆಗೆ ಸಾಕಾಗುವಷ್ಟು ಶುಲ್ಕ ಪಡೆದು ತರಬೇತಿ ಕೊಡುವ ಉದ್ದೇಶವನ್ನು ಹೊಂದಲಾಗಿದೆ.

ಸಂಪಾದಕರು
**ಶ್ರೀ ಶಿವಮೂರ್ತಿ ಕೀಲಾರ**
ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್
ಪ್ರಧಾನ ಕಾರ್ಯದರ್ಶಿ, ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ (ರಿ). ಮಂಡ್ಯ.

# ಶ್ರೀನಿವಾಸ ಕಲ್ಯಾಣ-ವೆಂಕಟಾದ್ರಿ ಮಹಿಮೆ

ಮಹಾವಿಷ್ಣು ಮಹಾಲಕ್ಷ್ಮಿಯನ್ನು ಬಿಟ್ಟನೆ? ಭೂಲೋಕದಲ್ಲಿ ಪದ್ಮಾವತಿಯನ್ನು ಮದುವೆಯಾದನೇ? ಹಾಗಿದ್ದರೆ ಈ ಪದ್ಮಾವತಿ ಯಾರು?

ವೃಷಭಾದ್ರಿ ವಾಸ ಅಂಜನಾದ್ರಿ ವಾಸ ಶೇಷಾದ್ರಿ ವಾಸ ವೆಂಕಟಾದ್ರಿ ವಾಸಶ್ರೀನಿವಾಸನನ್ನು ಕೊಂಡಾಡುತ್ತೇವೆ ಏಕೆ ಹಾಗೆ ಕರೆಯುತ್ತೇವೆ! ಅದರ ಅರ್ಥವೇನು? ಆ ಮಹಾ ಮಹಿಮನಿಗೆ ಇಬ್ಬರು ಹೆಂಡತಿಯರು ಎಂದು ಅಣಕಿಸುವುದು ಸರಿಯೇ? ನಾರಾಯಣನನ್ನು ತನ್ನ ಮಗನಾಗಿ ಸಾಕಿ ಈ ವಕುಳಾದೇವಿ ಯಾರು? ಹಾಗೆಯೇ ತನ್ನ ಮಗಳನ್ನು ಶ್ರೀಮನ್ನಾರಾಯಣನಿಗೆ ಧಾರೆ ಎರೆದುಕೊಟ್ಟ ಈ ಆಕಶರಾಜ ಯಾರು ?

ಇವುಗಳ ಕಾರಣಗಳೇನು, ಮತ್ತು ಅದರ ಲಕ್ಷ್ಯಾರ್ಥವನ್ನು ನಾವುಗಳು ಅರಿತಿರುವುದಿಲ್ಲ.

ಹಾಗಾಗಿ ಇವೆಲ್ಲ ಪ್ರಶ್ನೆಗಳಿಗೆ ಉತ್ತರವಾಗಿ ಇಂತಹ ಮಹಾಮಹಿಮನ ಮಹಾತ್ಮೆಯನ್ನು ಅರಿಯಲೋಸುಗವೇ ಕೈಲಾಸ ಕಲಾಧಾರ ದ ಪ್ರಸ್ತುತಿ ಶ್ರೀನಿವಾಸ ಕಲ್ಯಾಣ – ವೆಂಕಟಾದ್ರಿ ಮಹಿಮೆ ನೃತ್ಯ ನಾಟಕ.

ಇದು ಭಗವಂತನ ಕಲ್ಯಾಣ. ಸಾಮಾನ್ಯ ಮದುವೆಯಲ್ಲ. ಅದಕ್ಕೆ ಸಿದ್ಧತೆಗಳು ಪೂರ್ವ ನಿಯೋಜಿತ ಕಾರ್ಯಕಾರಣಗಳು, ಅವನ ಲೀಲಾನಾಟಕಗಳು, ವಿವಾಹ ತಯಾರಿ ಇವೆಲ್ಲವನ್ನೂ ಎಳೆ ಎಳೆ ಯಾಗಿ ಬಿಡಿಸಿ ನಿರೂಪಿಸುತ್ತಾ ಈ ರೂಪಕ ಸಾಗುತ್ತದೆ .ಬನ್ನಿ ಆ ಮಹಿಮೆಯ ಕಡಲಲ್ಲಿ ಹಾದು ಬರೋಣ. ಈ ಇಡೀ ಕಥೆ ಆ ಪರಮಾತ್ಮ ನಾರಾಯಣನು ನಾರದನ ಮೂಲಕ ಒಂದು ನಾಟಕವನ್ನು ಆಡಿದುವಂತೆ ಕಥಾ ಪ್ರಸಂಗ ತೆರೆದುಕೊಳ್ಳುತ್ತದೆ.

ಮೊದಲಿಗೆ ಪದ್ಮಾವತಿಯ ವೃತ್ತಾಂತದೊಂದಿಗೆ ಈ ಮಹಾಕಥೆಗೆ ಈ ರೂಪಕವು ನಾಂದಿಹಾಡುತ್ತದೆ.

ಋಷಧ್ವಜ ಎಂಬ ಮಹಾರಾಜ. ಈತ ಮಹಾಶಿವನ ಭಕ್ತನಾಗಿದ್ದನು. ಆದರೆ ವಿಷ್ಣುವನ್ನು, ವಿಷ್ಣು ಭಕ್ತರನ್ನು ನಿಂದಿಸುತ್ತಿದ್ದನು ಇದನ್ನು ಕಂಡ ಸೂರ್ಯದೇವ ನಿನ್ನ ಸಂಪತ್ತೆಲ್ಲ ನಾಶವಾಗಲಿ ಎಂದು ಶಪಿಸಿದನು. ಭಯದಿಂದ ರಾಜನು ಶಿವನ ಮೊರೆ ಹೊಕ್ಕ. ಆಗ ಈಶ್ವರನು ಸೂರ್ಯನನ್ನು ಶಿಕ್ಷಿಸಲು ಹೋದಾಗ ಮಹಾವಿಷ್ಣುವು ಹರನನ್ನು ಸಂತೈಸಿ ಈಗಾಗಲೇ ಇಪ್ಪತ್ತೊಂದು ಯುಗಗಳು ಕಳೆದು ಅವರ ವಂಶದಲ್ಲಿ ಮಹಾಲಕ್ಷ್ಮೀಯು ಅಂಶಾವತಾರವಾಗುತ್ತಿದೆ ಎಂದು ತಿಳಿಸಿದನು.ಆ ಪುತ್ರಿಕಾ ರತ್ನವೆ ವೇದಾವತಿ.

ಈಕೆ ಬಾಲ್ಯದಿಂದಲೇ ಹರಿಯ ಜಪ ಧ್ಯಾನಗಳಲ್ಲಿ ಮುಳುಗಿ ಆತನನ್ನೇ ಪತಿಯಾಗಿ ಪಡೆಯಲು ತಪೋನಿರತಳಾಗುತ್ತಾಳೆ. ಆ ಕಾಲದಲ್ಲೇ ವಿಹಾರಕ್ಕಾಗಿ ಧಾವಿಸಿದ ರಾವಣನ ಕುದೃಷ್ಟಿಗೆ ತಪಸ್ಸಿನಿಂದ ಮತ್ತಷ್ಟು ತೇಜಸ್ಸಿನಿಂದ ಹೊಳೆಯುತ್ತಿದ್ದ ವೇದಾವತಿ ಗೋಚರಿಸುತ್ತಾಳೆ. ಅವಳನ್ನು ಪಡೆಯಲೇ ಬೇಕೆಂಬ ಆಸೆಯಿಂದ ಬಲವಂತವಾಗಿ ಅವಳ ಕೇಶಸ್ಪರ್ಶಿಸುತ್ತಾನೆ. ಇದರಿಂದ ಕೋಪ– ದುಃಖಗಳಿಗೊಳಗಾದ ವೇದಾವತಿ ವಿಷ್ಣುವಿಗೆ ಸಲ್ಲಬೇಕಾದ ತಾನು ಪರ ಪುರುಷನ ಸ್ಪರ್ಷದಿಂದ ಅಪವಿತ್ರಳಾಡೆ ಎಂದು ತನ್ನ ಸ್ವಯಂ ಕ್ರೋಧಾಗ್ನಿಯಿಂದ ತನ್ನನ್ನು ತಾನೇ ದಹಿಸಿಕೊಳ್ಳುತ್ತಾಳೆ. ಮುಂದೆ ಇವಳೇ ಮಹಾಲಕ್ಷ್ಮಿಯ ಸೀತೆಯ ಅವತಾರದಲ್ಲಿ ಅವಳದೇಹದ ಛಾಯೆಯಾಗಿರುತ್ತಾಳೆ. ರಾವಣನು ಸೀತೆಯ ಅಪಹರಣ ಮಾಡುವ ಮುನ್ನ ಅಗ್ನಿದೇವರು ವೇದವತಿಯನ್ನು ಪಂಚವಟಿಯಲ್ಲಿರಿಸಿ ಸೀತೆಯನ್ನು ತವ್ಮೊಡನೆ ಕರೆದೊಯ್ಯುತ್ತಾರೆ.

ಅರ್ಥಾತ್

ವೇದಾವತಿ ದೇಹವಾದರೆ ಸೀತೆ ಮನಸ್ಸು. ಇಬ್ಬರು ಮಹಾಲಕ್ಷ್ಮಿ ಸ್ವರೂಪರು. ಯಾರು ಸಹ ಯಾರಿಂದಲೂ ಮನಸ್ಸನ್ನು ಎಳೆದೊಯ್ಯಲು ಆಗದು. ದೇಹ ಮಾತ್ರ ಎಳೆದೊಯ್ದು ಹೋಗಬಹುದು. ರಾವಣ ಕರೆದೊಯ್ದಾಗ ಸೀತೆಯಿಂದ ವೇದವತಿಯು ಅಂದರೆ ಮನಸ್ಸಿನಿಂದ ದೇಹವು ಬೇರ್ಪಡುತ್ತದೆ. ಅಂದರೆ ರಾವಣ ಸೀತೆಯ ದೇಹವನ್ನು ಮಾತ್ರ ಎಳೆದೊಯ್ದು ಸೀತೆಯ ಮನಸ್ಸನ್ನಲ್ಲ. ಯಾರ ಮನಸ್ಸನ್ನೂ ಬಲವಂತವಾಗಿ ಪಡೆಯಲು ಆಗುವುದಿಲ್ಲ ಎಂಬ ನಿದರ್ಶನ ಇದು. ನಮ್ಮ ಮನಸ್ಸು ಸ್ವಚ್ಛವಾಗಿ ಇದ್ದರೆ ದೇವರೇ ಅಗ್ನಿ ದೇವರು ಬಂದಾಹಾಗೆ ಯಾವುದಾದರೂ ರೂಪದಲ್ಲಿ ನಮ್ಮ ಮನಸ್ಸನ್ನೂ ರಕ್ಷಿಸುತ್ತಾನೆ ಎಂದು ಇದರ ಒಳ ಅರ್ಥ. ಆದರೆ ತ್ರೇತಾ ಯುಗದ ಅಂತ್ಯದಲ್ಲಿ ಸೀತೆ ( ಮನಸ್ಸು) ಮಾತ್ರ ರಾಮನ ಕೂಡುತ್ತಾಳೆ. ಆದರೆ ಒಂದು

ಹೆಣ್ಣು ದೇಹದಲ್ಲಿ ಹಾಗೂ ಮನಸ್ಸಿನಲ್ಲಿ ಎರಡರಲ್ಲೂ ಒಬ್ಬ ಪತಿಗೆ ಮೀಸಲಾಗಿರಬೇಕು. ಹಾಗೆಂದು ಏಕ ಪತ್ನಿ ವ್ರತಸ್ತ ರಾಮನು ಬೇರ್ಪಟ್ಟ ವೇದವತಿಯನ್ನೂ ಎರಡನೇ ಪತ್ನಿಯಾಗಿ ಸ್ವೀಕರಿಸಲಾಗದು . ಆದ್ದರಿಂದ ವೆದವತಿಯನ್ನು (ದೇಹ ) ಕೂಡ ಕಲಿಯುಗದಲ್ಲಿ ವಿಷ್ಣುವನ್ನು ಸೇರುತ್ತದೆ. ಹೀಗೆ ಕಡೆಯಲ್ಲಿ ಲಕ್ಷ್ಮಿಯ ದೇಹದ ಅಂಶ ಮತ್ತು ಮನಸ್ಸಿನ ಅಂಶ ಎರಡು ವಿಷ್ಣುವನ್ನು ಕೂಡುತ್ತದೆ ಎಂಬುದೇ ಮೂಲ ಸಾರ. ಹೀಗೆಂದು ವಿಷ್ಣುವು ರಾಮಾವತಾರದಲ್ಲಿ ವೇದಾವತಿಗೆ ಸೀತೆಯ ಮಾತಿನಂತೆ ಭಾಷೆ ನೀಡುತ್ತಾನೆ. ಕಲಿಯುಗದಲ್ಲಿ ಪೂರೈಸುತ್ತಾನೆ .

ಇದಾದ ನಂತರ ನಮ್ಮಲ್ಲಿ ಕಾಡುವ ಪ್ರಶ್ನೆ ಮಹಾವಿಷ್ಣುವು ಏಕೆ ವೆಂಕಟಾಚಲದಲ್ಲಿ ನೆಲೆನಿಂತ? ಎಂಬ ಪ್ರಶ್ನೆ

ಹಲವಾರು ಮಂದಿ ತಿಳಿದಿದ್ದೇವೆ ಆ ಬೆಟ್ಟಕ್ಕೆ ವೆಂಕಟೇಶ ನೆಲೆನಿಂತ ಕಾರಣದಿಂದ ವೆಂಕಟಾಚಲ ಎಂದೆನಿಸಿತು ಎಂದು. ಆದರೆ ಸತ್ಯಕಾರಣವೇ ಬೇರೆ. ಈ ಬೆಟ್ಟವು ನಾಲ್ಕು ಯುಗಗಳಲ್ಲಿಯು ಪುರಾಣ ಪುಣ್ಯಪ್ರದವಾಗಿ ಶುದ್ಧವೆನಿಸಿತ್ತು. ಆ ಕಾರಣದಿಂದಲೇ ಮಹಾವಿಷ್ಣುವು ಅಲ್ಲಿ ನೆಲೆ ನಿಂತು ತನ್ನ ಭಕ್ತಾದಿಗಳನ್ನು ಹರಸುತ್ತಿದ್ದಾನೆ. ಒಂದೊಂದು ಯುಗಗಳ ಕಥೆಯು ಅತ್ಯಮೋಘ. ಕೃತಯುಗದಲ್ಲಿ ನರಸಿಂಹ ಸಾಲಿಗ್ರಾಮವನ್ನು ಬಹಳ ನಿಷ್ಠೆಯಿಂದ ಪೂಜಿಸುತ್ತಿದ್ದ ಒಬ್ಬ ರಕ್ಕಸನೇ ವೃಷಭಾಸುರ. ಪ್ರತಿದಿನವೂ ತನ್ನ ಶಿರಸ್ಸನ್ನು ಕಡಿದು ಆ ಸಾಲಿಗ್ರಾಮಕ್ಕೆ ಅರ್ಪಿಸಿ ಮಗದೊಂದು ಹೊಸ ಶಿರಸ್ಸನ್ನು ಪ್ರತಿದಿನವು ಪಡೆಯುತ್ತಿದ್ದ. ನೇಮ ನಿಷ್ಠೆಯಿಂದ ಪೂಜೆಗೈದರೂ ಅಸುರ ಪ್ರವೃತ್ತಿಯಿಂದ ನಿಷ್ಪಾಪಿಗಳನ್ನು ಕೊಂದು ದೇವತೆಗಳ ಕೋಪಕ್ಕೆ ಗುರಿಯಾದ. ಎಲ್ಲಾ ಸಜ್ಜನರು ಹರಿಯ ಮೊರೆ ಹೊಕ್ಕಾಗ, ಹರಿಯು ಪ್ರಸನ್ನನಾಗಿ ವೃಷಭಾಸುರನಿಗೆ ಬೇಕಾದ ವರವನ್ನು ಕೇಳು ಎಂದು ಹೇಳಿದಾಗ, ಮಂದಮತಿ ರಾಕ್ಷಸನು ವಿಷ್ಣುವಿನೊಡನೆ ಯುದ್ಧ ಅಪೇಕ್ಷಿಸಿದ. ಯುದ್ಧದಲ್ಲಿ ಮಹಾಸುದರ್ಶನ ದರ್ಶನದಿಂದ ವೃಷಭಾಸುರನು ಆ ಪ್ರಭೆಯ ಮುಂದೆ ಸೋತುಹೋದನು. ತಾನು ಸೋತರು ತನ್ನ ಹೆಸರನ್ನೇ ಈ ಗಿರಿಗೆ ನೇಮಿಸಲು ಕೇಳಿದ. ಅಂದಿನಿಂದ ಈ ಗಿರಿಯು ವೃಷಭಾಚಲ ಎಂದು ನಾಮಧೇಯುವಾಯಿತು. ಅದೇ ವೃಷಭಾಚಲದಲ್ಲೆ ತ್ರೇತಾಯುಗದಲ್ಲಿ ಅಂಜನಾದೇವಿಯು ಪುತ್ರಾಭಿಷಿಕ್ತಳಾಗಿ ಘೋರ ತಪಸ್ಸನ್ನಾಚರಿಸಿ, ವಾಯುದೇವರ ವರಪ್ರಸಾದದಿಂದ ಶ್ರೀರಾಮದೂತ ಆಂಜನೇಯನನ್ನು ಮಗನಾಗಿ ಪಡೆದಳು ಅಂದಿನಿಂದ ಈ ಶಿಖರವು ಅಂಜನಾಚಲ ಎಂದು ಖ್ಯಾತವಾಯಿತು.

ಈ ಅಂಜನಾದ್ರಿಯೆ ದ್ವಾಪರದಲ್ಲಿ ಮತ್ತೊಂದು ಹೆಸರನ್ನು ಪಡೆಯಿತು

ವೈಕುಂಠದಲ್ಲಿ ಒಮ್ಮೆ ನಾರಾಯಣನು ಆದಿಶೇಷನಿಗೆ ದ್ವಾರದ ಒಳಗೆ ಯಾರನ್ನು ಬರಲು ಬಿಡಬೇಡ ಎಂದು ಆಜ್ಞಾಪಿಸಿದನು. ಈ ಸಮಯಕ್ಕೆ ವಾಯುದೇವರು ನಾರಾಯಣನ ದರ್ಶನಕ್ಕಾಗಿ ಬರುತ್ತಾರೆ. ಆಗ ಶೇಷನು ಬಿಡುವುದಿಲ್ಲ ಹರಿಯ ಅಪ್ಪಣೆ ಆಗಿದೆ. ನಾನು ಹರಿಯ ಭಕ್ತ, ನಾನು ಹೇಳಿದ ಹಾಗೆ ನೀನು ಕೇಳಬೇಕು ಎಂದು ವಾದಿಸುತ್ತಾ ಅವನ ಭಕ್ತಿ ಮಾತನಾಡುತ್ತಾ ಮುಂದುವರೆದು ಅಹಂಕಾರವಾಗಿಬಿಡುತ್ತದೆ. ಇದನ್ನು ನೋಡಿದ ಮಹಾವಿಷ್ಣುವು ಅವರ ಕದನಕ್ಕೆ ಅಂತ್ಯಹಾಡಲು ಒಂದು ಪಂದ್ಯ ಹೂಡುತ್ತಾನೆ. ಆ ಪಂದ್ಯದ ಅನುಸಾರ ಶೇಷನು ಮೇರು ಪರ್ವತದ ಮಗನಾದ ಆನಂದಾದ್ರಿಯನ್ನು ಸುತ್ತಿಕೊಳ್ಳಲಿ, ವಾಯುದೇವರು ಆ ಶಿಖರವನ್ನು ಅಲುಗಾಡಿಸಬೇಕು. ಅದು ಕದಲದಿದ್ದರೆ ಶೇಷನು ಗೆದ್ದ ಹಾಗೆ ಎಂದು. ಆದರೆ ವಾಯುದೇವರ ಸ್ಪರ್ಶಮಾತ್ರದಿಂದ ಈ ಶೇಷನ ಸಮೇತವಾಗಿ ಆನಂದಾದ್ರಿ ಶಿಖರವು ಹಾರಿ ಬೀಳುತ್ತದೆ. ಶೇಷನಿಗೆ ತನ್ನ ತಪ್ಪಿನ ಅರಿವಾಗಿ ಸೋತು ಶರಣಾಗುತ್ತಾನೇ. ಅಂದಿನಿಂದ ಈ ಆನಂದ್ರಾದ್ರಿ ಎನಿಸಿದ ಅಂಜನಾಚಲವೆ ಶೇಷಾಚಲವೆಂದೆನಿಸುತ್ತದೆ.

ಮುಂದೆ ಕಲಿಯುಗದಲ್ಲಿ ಒಮ್ಮೆ ಮಾಧವ ಎಂಬ ದ್ವಿಜನು ತನ್ನ ಪತಿಯನ್ನು ತಿರಸ್ಕರಿಸಿ ಓರ್ವ ನೀಚ ಹೆಣ್ಣನ್ನು ಕೂಡುತ್ತಾನೆ. ನಂತರದಲ್ಲಿ ತನ್ನ ತಪ್ಪಿನ ಅರಿವಾಗಿ ಶೇಷಾಚಲದ ಯಾತ್ರೆಯನ್ನು ಕೈಗೊಳ್ಳುತ್ತಾನೆ. ಅಲ್ಲಿಗೆ ಹೋಗುತ್ತಿದ್ದಂತೆ ವಮನ ರೂಪದಲ್ಲಿ ತ್ಯಾಜ್ಯವನ್ನು ತನ್ನ ಕಾಯದಿಂದ ಹೊರಹಾಕಿ, ಬ್ರಹ್ಮದೇವರ ಮಾತಿನಂತೆ ಶಿಖರದ ಸ್ವಾಮಿ ಪುಷ್ಕರಣಿಯಲ್ಲಿ ಮಿಂದು ಜನ್ಮ ಜನ್ಮಾಂತರಗಳ ಪಾಪಗಳನ್ನು ಕಳೆದುಕೊಂಡು ದೇಹವನ್ನು ತ್ಯಜಿಸುತ್ತಾನೆ . ಈತನೇ ಮುಂದೆ ಆಕಾಶರಾಜ ನೆಂಬ ನಾಮಾಂಕಿತನಾಗಿ ಜನಿಸಿ, ವೇದವತಿಯೇ ಪದ್ಮಾವತಿಯಾಗಿ ಈತನಿಗೆ ಮಗಳಾಗುತ್ತಾಳೆ . ಆಕಶರಾಜನು ಪದ್ಮಾವತಿಯ ಪಿತನೆನಿಸುತ್ತಾನೆ .ವೆಂ ಎಂದರೆ ಪಾಪ ಕಟ ಎಂದರೆ ಕಡಿದು ಹಾಕುವುದು. ಪಾಪ ತೊಳೆದ ಗಿರಿಯೇ ವೆಂಕಟಾಚಲ ಎಂದೆನಿಸಿತು. ಬೆಟ್ಟದ ಹೆಸರಾಗಿ ಸೋತವರ ಹೆಸರನ್ನು ನೇಮಿಸಿ ಅವರಂತೆ ನಾವುಗಳಾರು ಆಗಬಾರದೆಂಬ ಆದರ್ಶವನ್ನು ಭಗವಂತ ತಿಳುಹಿದ್ದಾನೆ. ಇಂತಹ ಪುಣ್ಯಕರವಾದ ಸ್ಥಳ ಎನಿಸಿದ

ವೆಂಕಟಾಚಲವೇ, ಮಹಾವಿಷ್ಣುವು ನೆಲೇನಿಲ್ಲಲ್ಲು ಆರಿಸಿದ ಸ್ಥಳ. ಅಲ್ಲಿ ನೆಲೆನಿಂತ ಕಾರಣಕ್ಕಾಗಿ ವಿಷ್ಣುವಿಗೆ ವೆಂಕಟೇಶ ಎಂಬ ಹೆಸರು. ಈಗ ತಿಳಿಯಿತೇ!? ಈಕೆ ಶ್ರೀನಿವಾಸನಿಗೆ ವೆಂಕಟೇಶ, ವೃಷಭಾದ್ರಿ ವಾಸ ಅಂಜನಾದ್ರಿ ವಾಸ ಶೇಷಾದ್ರಿ ವಾಸ ಎನ್ನುತ್ತಾರೆ ಎಂಬ ಕಾರಣ ಅರಿವಾಯಿತು!.

ಈಗ ಆರಂಭವಾಗುತ್ತದೆ ಶ್ರೀನಿವಾಸ ಕಲ್ಯಾಣದ ಹೃದ್ಭಾಗ. ಭೃಗು ಮಹರ್ಷಿಗಳ ತಪಸ್ಸು, ಯಜ್ಞ ಫಲ ಅರ್ಪಿಸಲು ತ್ರಿಮೂರ್ತಿಗಳಪರೀಕ್ಷೆ ಮಾಡಲು ಅವರ ತ್ರಿಲೋಕ ಸಂಚಾರ . ವೈಕುಂಠದಲ್ಲಿ ಅಹಂಕಾರದಿಂದ ವಿಷ್ಣುವಿನ ವಕ್ಷ ಸ್ಥಳಕೆ ಒದ್ದಾಗ ಅದನ್ನು ತಡೆಯಲಾರದೆ ಲಕ್ಷ್ಮೀ ಭೂಲೋಕಕ್ಕೆ ಬರುತ್ತಾಳೆ. ಭೃಗು ಮುನಿಗಳ ದರ್ಪ ಮುರಿದು ವಿಷ್ಣುವು ಲಕ್ಷ್ಮೀ ಲಕ್ಷ್ಮೀ ಎಂದು ಹಿಂಬಾಲಿಸುತ್ತಾ ಶ್ರೀನಿವಾಸನು ಭೂಲೋಕದಲ್ಲಿ ಸಾಮಾನ್ಯ ಮಾನವನಾಗಿ ಬಂದಿಳಿಯುತ್ತಾನೆ.

ಅಲ್ಲಿ ವರಾಹ ದೇವರ ಆಣತಿಯಂತೆ ವಕುಳ ದೇವಿಯ ಮಗನಾಗಿ ಹೋಗುತ್ತಾನೆ. ಈ ವಕುಳದೇವಿ ಯಾರು? ಹಿಂದಿನ ಜನ್ಮದಲ್ಲಿ ಯಶೋಧೆಯಾಗಿ ಕೃಷ್ಣನನ್ನು ಸಾಕಿ ಸಲುಹಿದವಳೆ ಇವಳು. ತನ್ನ ಮಗನ ವಿವಾಹ ವೀಕ್ಷಿಸುವ ಅಭಿಲಾಷೆ ಹಿಂದಿನ ಅವತಾರದಲ್ಲಿ ಈಡೇರದ ಕಾರಣ ಈಗ ಮತ್ತೆ ವಿಷ್ಣುವಿಗೆ ತಾಯಿಯಾಗುತ್ತಾಳೆ. ವಕುಳ ದೇವಿಯು ಶ್ರೀನಿವಾಸನೊಡನೆ ಇರುವಾಗ ತನ್ನ ಪೂರ್ವಜನ್ಮದ ಸ್ಮರಣೆಗಾಗಿ ಆ ಯಶೋಧಾ ಕೃಷ್ಣರ ದೃಶ್ಯವೂ ರಂಗದ ಮೇಲೆ ಬರುವುದು ಅವರ್ಣನೀಯ.

ಹೀಗೆ ಶ್ರೀನಿವಾಸ ಬೇಟೆಗೆ ಒಮ್ಮೆ ಹೋದಾಗ ವಿಹಾರಕ್ಕೆ ಬಂದ ರಾಜಕುಮಾರಿ ಪದ್ಮಾವತಿಯ ಕಂಡು ಪ್ರೇಮಿತನಾಗಿ, ಅವಳನ್ನು ಪಡೆಯಲು ತಾಯಿಯನ್ನು ನಾರಾಯಣ ಪುರಿಗೆ ಕನ್ಯಾಯಪೇಕ್ಷಿಯಾಗಿ ಕಳುಹಿಸಿ, ತಾನೂ ಕೊರವಂಜಿ ರೂಪದಲ್ಲಿ ಹೋಗುವುದು ಎಲ್ಲರನ್ನೂ ನಗೆಯ ಹೊನಲಿನಲ್ಲಿ ತೆಲಿಸುತ್ತದೆ. ಅಲ್ಲಿ ಅಕಾಶರಾಜ ಧರಣಿ ದೇವಿಯರನ್ನು ಒಪ್ಪಿಸಲಾಗುವುದು.

ನಂತರವೇ ಎಲ್ಲರೂ ಕಾದು ಕುಳಿತಿದ್ದ ಶ್ರೀನಿವಾಸ ಪದ್ಮಾವತಿ ಯಾರ ವಿವಾಹ. ಅದನ್ನು ಕಣ್ತುಂಬಿಕೊಳ್ಳಲು ಎರಡು ಕಣ್ಣು ಸಾಲದು. ಸಕಲ ದೇವತೆಗಳ ಆಗಮನ, ಕುಬೇರನಿಂದ ಧನಸಹಾಯ, ಪುಷ್ಕರಣಿಯಲ್ಲಿ ಪಾಕ ಗೈದ ಅಗ್ನಿದೇವ, ಸಖಿಯರಿಂದ ಹಲವು ರೀತಿಯ ವಿವಾಹ ಸಿಂಗಾರ ಹೀಗೆ ವಿವಾಹ ಆರಂಭವಾಗಿ ಬೃಹಸ್ಪತಿಯ ಆಚಾರ್ಯತ್ವದಲ್ಲಿ ಶಾಸ್ತ್ರೋಕ್ತವಾಗಿ ಪದ್ಮಾವತಿಯನ್ನು ಶ್ರೀನಿವಾಸನಿಗೆ ಧಾರೆ ಎರೆಯಲಾಗುತ್ತದೆ.

ನಂತರ ಶ್ರೀನಿವಾಸ ಲಕ್ಷ್ಮೀ ಪದ್ಮಾವತಿ ಸಮೇತನಾಗಿ ಉಯ್ಯಾಲೆ ಸೇವೆ. ಹೀಗೆಯೇ ಶ್ರೀನಿವಾಸ ಕಲ್ಯಾಣೋತ್ಸವ ವನ್ನು ನೋಡು ನೋಡುತ್ತಿದ್ದಂತೆ ಯಾರ ಊಹೆಗೂ ನಿಲುಕದಂತೆ ಸಪ್ತ ದ್ವಾರಗಳು ತೆರೆದು ಆ ಶ್ರೀನಿವಾಸನ ಶೀಲಾ ರೂಪದ ದರ್ಶನವಾಗುತ್ತದೆ. ಆ ತಿರುಮಲೆಯ ಮೇಲೆ ನಿಂತಿರುವ ಶ್ರೀನಿವಾಸ ವಿಗ್ರಹವೇ ಇಲ್ಲಿಗೆ ಬಂದು ನಿಂತಿತೇನೋ ಅನ್ನುವಷ್ಟು ತೇಜೋಪೂರಿತವಾಗಿ ಕಂಗೊಳಿಸುತ್ತಾ ನೆಲೆ ನಿಂತ ಶ್ರೀನಿವಾಸನನ್ನು ನೋಡಿ ಪ್ರೇಕ್ಷಕರಲ್ಲಿ ಆನಂದಬಾಷ್ಪ ತುಂಬಿ ಬಂದದ್ದು ಸುಳ್ಳಲ್ಲ. ಶಂಖ ಚಕ್ರಗಳನ್ನು ಧರಿಸಿ, ಕರ್ಣಕುಂಡಲ, ತೋಮಾಲೆಗಳಿಂದ ಅಲಂಕೃತಗೊಂಡು, ತನ್ನ ಹೃದ್ಭಾಗದಲ್ಲಿ ಲಕ್ಷ್ಮೀ ಪದ್ಮಾವತಿಯರ ಕುರುಹಿನೊಂದಿಗೆ ನಿಂತಿದ್ದ ಆ ಸ್ವಾಮಿಯನ್ನು ಭಕ್ತರು ಕಣ್ತುಂಬಿಕೊಳ್ಳುವಾಗಲೇ ಪುರಂದರ ದಾಸರ ಆಗಮನ. ದಾಸರು ವೆಂಕಟೇಶನನ್ನು ಧನ್ಯತೆಯಿಂದ ಸ್ತುತಿಸಿ ಕುಣಿಯುತ್ತಾ ನಲಿಯುತ್ತ ವೆಂಕಟೇಶನ ನಾಮದಲ್ಲೆ ಮೈಮರೆತು ನೆರೆದಿರುವವರೆಲ್ಲಾರನ್ನು ಶ್ರೀನಿವಾಸ ಗೋವಿಂದ ಎಂದು ಘೋಷಿಸುವಂತೆ ಅವರನ್ನು ತನ್ಮಯರಾಗಿ ಮಾಡಿದ್ದು ಒಂದು ದೈವಾನುಭಾವವೇ ಸರಿ . ಕಥಾಂತ್ಯದಿ ಕಥಾಕಾರ ನಾರದರು ಬಂದು ಎಲ್ಲಾ ಭಕ್ತಪ್ರೇಕ್ಷಕರಿಗೆ ಲಕ್ಷ್ಮೀಯೇ ಪದ್ಮಾವತಿಯೆಂದು ತಿಳಿಸಿ, ಈ ಪುಣ್ಯಕರವಾದ ಕಥೆಯ ಹೇಳಿದ, ಕೇಳಿದ, ಓದಿದ, ನೋಡಿದ ಸರ್ವರಿಗೂ ಶ್ರೀನಿವಾಸನ ಸಾಕ್ಷಾತ್ಕಾರವಾಗಲೆಂದು ಹರಸಿ ಸರ್ವೇಜನಃ ಸುಖಿನೋ ಭವಂತು ಎಂದು ನೃತ್ಯನಾಟಕಕ್ಕೆ ಮಂಗಳ ಹಾಡುತ್ತಾರೆ .ಹೀಗೆ ಹೇಳುತ್ತ ಹೋದರೆ ರಂಗದ ಮೇಲೆ ಇಳಿದ ವೈಕುಂಠ ನಮ್ಮ ಮನಸ್ಸೊಳಗೆ ಕೂಡ ಪ್ರತಿಷ್ಠಾಪಿತವಾಗಿ ಮತ್ತೊಂದು ಲೋಕಕ್ಕೇ ಕರೆದೊಯ್ದು ಹೋಗುತ್ತದೆ. ಎಲ್ಲರ ತನುಮನದೊಳಗೆ ಶ್ರೀನಿವಾಸ ದರ್ಶನವಾಯಿತು ಎಂಬುದಕ್ಕೆ ಸಂಶಯವೇ ಇಲ್ಲ.



**ಗುರು ಡಾ|| ಜಯಲಕ್ಷ್ಮಿ ಜಿತೇಂದ್ರಭಾಗವತ**
**ಕೈಲಾಸಕಲಾಧಾರ ಚಾರಿಟಬಲ್ ಟ್ರಸ್ಟ್**
**ಜಯನಗರ 9ನೇ ಬ್ಲಾಕ್, ಜೆ.ಪಿ ನಗರ್, ಬೆಂಗಳೂರು–560069**

# ANANTHA ARMY TRAINING ACADEMY

Sugar city Mandya has been representing the district in its own cultural arena, since Mandya is an irrigational land & the scenic beauty of the district makes it appealing.

Moodaladoddi at Maddur a remote place in which is blooming as an agricultural hub which has created employment opportunity to the underprivileged community through cottage industries.

Sri. Shivamurthy Keelara, Ex. President, AKKA (USA), Chairman, Charity Chair, AKKA & General Secretary , Abhinava Bharathi Group of Institution, Mandya & also a renowned social activist has initiated a noble venture at Moodaladoddi, Koppa, Maddur, the scenic beauty of the location is an added glory to the location.

Cottage industries are set up with the intention of supporting the localites specially the underprivileged community, be it unskilled illiterate women folk or senior citizen of the place, even such deprived communities are provided with an employment opportunity to support their lives.

The set up of cottage industries has stabilized the rural economy by creating massive employment opportunities.

Cottage industries like Camphor making, Arecanut plate making, Garments Factory, Agarbathi Packaging, Food Packaging & the centre of attraction to the place is a wish fulfilling Dakshina Murthy & Maha Ganapathi temple & a Gaushala with a cold pressed oil extraction unit.

The rural youth population who do not aim for a specific goal in life, in order to create hopes in their lives, Sri. Shivamurthy Keelara when he tend to visit the rural places, he realised that rural youth found to be killing their days, either by discussing local politics or cinema & get indulged into gambling. Hence, “Anantha Army Academy” is initiated to create hope among the rural youth. Candidates around six districts are getting enrolled for “Anantha Army Training Academy”, since its unique of its kind, enrollment as well as enquiries are appreciative.

Along with all the existing multiple businesses, Mr. Shivmurthy Keelara has initiated a new adventurous task by setting up a military training unit entitled as “ Anantha Army Training Academy”. Which is exclusively started for the rural youth to build a career for oneself , be it in army, defense, Navy, Air force, forest guard, CRPF, BSF, Railway Police, PSI, PC or Fire fighters at a very minimal fees.

Rural youth in & around Mandya who have cleared SSLC / PUC or an unsuccessful attempt can enroll for the training & after Completion can successfully get placed & serve the nation.

It is a golden opportunity to the rural as well as urban youth to build a future for their own lives, “Anantha Army Academy” is a humble attempt to serve the nation by creating opportunities to the marginalized.



**Smt. Anjali Joshi**
Principal, Abhinava
Bharathi Vidya Kendra,
HS(EM), Mandya

# ನೀತಿ ಶಾಸ್ತ್ರದಲ್ಲಿ ಯುದ್ಧ ನೀತಿ

ಕೌಟಿಲ್ಯ ಎಂಬ ಚಾಣಕ್ಯ ತನ್ನ " ಅರ್ಥಶಾಸ್ತ್ರ " ಎಂಬ ರಾಜಕೀಯ ಮತ್ತು ಆಡಳಿತಾತ್ಮಕ ನೀತಿಶಾಸ್ತ್ರದಲ್ಲಿ ಯುದ್ದ ನೀತಿಯು ಬಗ್ಗೆ ಅನೇಕ ಮಹತ್ವದ ಅಂಶಗಳನ್ನು ಪ್ರಸ್ತಾಪಿಸಿದ್ದಾನೆ. ರಷ್ಯಾ ಮತ್ತು ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳ ಒಕ್ಕೂಟವಾದ ನ್ಯಾಟೋ ನಡೆ ಬಹುತೇಕ ಅದರ ಅನುಕರಣೆಯಂತೆ ಭಾಸವಾಗುತ್ತಿದೆ.

ಚಾಣಕ್ಯ ವಿದೇಶಾಂಗ ನೀತಿಯು ಭಾಗವಾಗಿ ನೆರೆಹೊರೆಯ ದೇಶಗಳ ಮಿತ್ರತ್ವ ಮತ್ತು ಶತ್ರುತ್ವಗಳ ಒಂದು ಸಿದ್ಧಾಂತವನ್ನು ತನ್ನದೇ ರೀತಿಯಲ್ಲಿ ಆಗಿನ ಕಾಲದಲ್ಲಿಯೇ



ವಿವರಿಸುತ್ತಾನೆ. ಮೌರ್ಯ ಸಾಮ್ರಾಜ್ಯದ ಸ್ಥಾಪನೆಗೆ ಪಣತೊಟ್ಟು ಅದರಲ್ಲಿ ಯಶಸ್ವಿಯಾದ ಮಹಾನ್ ಹೋರಾಟಗಾರರ ಚಾಣಕ್ಯ. ಆತನ ಚಿಂತನೆಗಳು ಒಣ ವೇದಾಂತಗಳಲ್ಲ. ಅನುಭವದ ರಸಪಾಕ. "ಶತ್ರುವಿನ ಶತ್ರು ಮಿತ್ರ " ಎಂಬುದು ಇದರ ಒಳ ಸಾರಾಂಶ.

ಒಂದೇ ದೇಶವಾಗಿದ್ದ ಸೋವಿಯತ್ ಯೂನಿಯನ್ ಒಕ್ಕೂಟದ ಭಾಗವಾಗಿದ್ದ ರಷ್ಯಾ ಮತ್ತು ಉಕ್ರೇನ್ ಬೇರೆ ದೇಶಗಳಾಗಿ ವಿಭಜನೆಯಾಗುತ್ತದೆ. ಒಂದು ಕಾಲದಲ್ಲಿ ಶೀತಲ ಸಮರದ ಅವಧಿಯಲ್ಲಿ ತನ್ನ ಪ್ರಬಲ ಶತ್ರು ದೇಶವಾಗಿದ್ದ ರಷ್ಯಾವನ್ನು ಅಂತರರಾಷ್ಟ್ರೀಯವಾಗಿ ನಿಯಂತ್ರಿಸಲು ಅಮೆರಿಕ ಸದಾ ಹೊಂಚು ಹಾಕುತ್ತಿರುತ್ತದೆ. ಹಾಗೆಯೇ ರಷ್ಯಾ ಸಹ ಸಮಯ ಕಾಯುತ್ತಿರುತ್ತದೆ. ಅಮೆರಿಕದ ವಿರೋಧಿಗಳ ಜೊತೆ ಸದಾ ಸಂಪರ್ಕದಲ್ಲಿ ಇರುತ್ತದೆ.

ಇಂತಹ ಸಂದರ್ಭದಲ್ಲಿ ಉಕ್ರೇನ್ ದೇಶಕ್ಕೆ ವ್ಲಾಡಿಮಿರ್ ಝೆಲೆನ್ಸ್ಕಿ ಎಂಬ ಜನಪ್ರಿಯ ಹಾಸ್ಯ ಕಲಾವಿದ ಅತಿಹೆಚ್ಚು ಮತ ಪಡೆದು ಅಧ್ಯಕ್ಷನಾಗಿ ಆಯ್ಕೆಯಾಗುತ್ತಾನೆ.

ಈತ ಮೂಲಭೂತವಾಗಿ ರಷ್ಯಾದ ವಿರುದ್ಧದ ಮನೋಭಾವ ಮತ್ತು ಅಮೆರಿಕ ಪರವಾದ ಒಲವು ನಿಲುವು ಹೊಂದಿರುತ್ತಾನೆ. ಬಹುಶಃ ಉಕ್ರೇನ್ ಮೇಲೆ ರಷ್ಯಾದ ಆಕ್ರಮಣಕಾರಿ ಒತ್ತಡ ಆತನ ಸ್ವಾಭಿಮಾನಕ್ಕೆ ಧಕ್ಕೆ ತರುವಂತ ಪರಿಸ್ಥಿತಿ ನಿರ್ಮಾಣ ಮಾಡಿರಬೇಕು.

ಇದನ್ನು ಮನಗಂಡ ಅಮೆರಿಕ ತನ್ನ ರಕ್ಷಣಾ ಒಕ್ಕೂಟ ನ್ಯಾಟೋಗೆ ಉಕ್ರೇನ್ ಸೇರಿಸಿಕೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡುತ್ತದೆ. ಇದರ ಸುಳಿವರಿತ ರಷ್ಯಾ ತನ್ನ ಭದ್ರತೆಗೆ ಅಪಾಯ ಎಂದು ಪರಿಗಣಿಸಿ ಉಕ್ರೇನ್ ಮೇಲೆ ಯುದ್ಧ ಸಾರುತ್ತದೆ.

ಒಂದು ಕಾಲದಲ್ಲಿ ಅಮೆರಿಕದ ಶತ್ರು ದೇಶವಾಗಿದ್ದ ಸೋವಿಯತ್ ಯೂನಿಯನ್ ನ ಎರಡು ರಾಷ್ಟ್ರಗಳು ತಮ್ಮ ನಡುವೆಯೇ ಯುದ್ದಕ್ಕೆ ಇಳಿದಾಗ ಅಮೆರಿಕ ಚಾಣಕ್ಯನ ನೀತಿಯ ಜಾರಿಗೆ ಒಳ ನುಸುಳುತ್ತದೆ. ತನ್ನ ಶತ್ರು ರಷ್ಯಾದ ಶತ್ರುವಾದ ಉಕ್ರೇನ್ ಅಮೆರಿಕದ ಮಿತ್ರ ದೇಶವಾಗುತ್ತದೆ. ಯುದ್ಧ ನಡೆಯುವುದು ತನ್ನ ಒಂದು ಕಾಲದ ಶತ್ರುಗಳ ನಡುವೆ.

ಈಗ ಅಮೆರಿಕ ಈ ಯುದ್ದ ನಿಲ್ಲಿಸುವ ಯಾವುದೇ ಪ್ರಯತ್ನ ಮಾಡದೆ, ನೇರವಾಗಿ ಉಕ್ರೇನ್ ಪರವಾಗಿ ಯುದ್ದಕ್ಕೆ ನಿಲ್ಲದೆ ಹಿನ್ನೆಲೆಯಲ್ಲಿ ನಿಂತು ಉಕ್ರೇನ್ ಗೆ ಎಲ್ಲಾ ರೀತಿಯ ಬೆಂಬಲ ಕೊಡುತ್ತದೆ. ಈ ಬೆಂಬಲ ಉಕ್ರೇನ್ ಜನರ ಹೆಣಗಳ ರಾಶಿಯ ಮೇಲೆ ಎಂಬ ಒಳ ಸತ್ಯ ಮರೆಯಬಾರದು.

ಹಾಗೆಯೇ ಇದು ಇಲ್ಲಿಗೇ ನಿಲ್ಲುವುದಿಲ್ಲ ಅಥವಾ ನಿಲ್ಲಲು ಬಿಡುವುದಿಲ್ಲ. ಈ ಯುದ್ಧ ವಾಸ್ತವದಲ್ಲಿ

ನಡೆಯುತ್ತಿರುವುದು ಉಕ್ರೇನ್ ನೆಲದಲ್ಲಿ. ಏನೇ ದೊಡ್ಡ ಅನಾಹುತ ಆದರೂ ಅದಕ್ಕೆ ಉಕ್ರೇನ್ ಬಲಿಯಾಗುತ್ತದೆ. ಅದಕ್ಕೆ ಕಾರಣ ರಷ್ಯಾ ಆಗುತ್ತದೆ. ಎರಡೂ ದೇಶಗಳ ಮೇಲೆ ಅಪಾಯದ ತೂಗು ಕತ್ತಿ ಇರುತ್ತದೆ.

ಜೊತೆಗೆ ಈ ಯುದ್ಧ ದೀರ್ಘಕಾಲ ನಡೆಯುವಂತೆ ಮತ್ತು ಉಕ್ರೇನ್ ಪರೋಕ್ಷವಾಗಿ ಸಂಪೂರ್ಣ ಸೋಲದಂತೆ ಎಲ್ಲಾ ರೀತಿಯ ಯುದ್ಧೋಪಕರಣ ನೀಡಿ ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿಯನ್ನು ಪ್ರಚೋದಿಸುತ್ತಾ ಸಾಧ್ಯವಾದಷ್ಟು ದೀರ್ಘ ಅವಧಿಗೆ ಎಳೆದರೆ ರಷ್ಯಾದ ಸೈನ್ಯ, ಅಲ್ಲಿನ ಆರ್ಥಿಕ ಪರಿಸ್ಥಿತಿ, ಜನರ ಮಾನಸಿಕ ಪರಿಸ್ಥಿತಿ ಸಹಜವಾಗಿ ಬಸವಳಿದು ಒಂದಷ್ಟು ದುರ್ಬಲವಾಗುತ್ತದೆ. ಆ ಸಮಯವನ್ನು ಉಪಯೋಗಿಸಿಕೊಂಡು ರಷ್ಯಾವನ್ನು ಮತ್ತಷ್ಟು ದುರ್ಬಲಗೊಳಿಸುವ ತಂತ್ರಗಾರಿಕೆಯನ್ನು ತಾಳ್ಮೆಯಿಂದ ನಿರ್ವಹಿಸುವ ಚಾಣಕ್ಯ ನೀತಿ ಇಲ್ಲಿ ಕಂಡುಬರುತ್ತಿದೆ.

ಈಗಾಗಲೇ ಈ ಯುದ್ಧವನ್ನು ದೀರ್ಘಕಾಲ ಎಳೆಯುತ್ತಾ, ನ್ಯಾಟೋ ಒಕ್ಕೂಟದೊಂದಿಗೆ ಸೇರಿ ಮೂರನೇ ಮಹಾಯುದ್ಧದ ಸಿದ್ಧತೆಯಲ್ಲಿ ಅಮೆರಿಕ ನೇತೃತ್ವದ ಪಡೆ ತೊಡಗಿದೆ. ರಷ್ಯಾ ಇನ್ನಷ್ಟು ದುರ್ಬಲವಾಗುವುದನ್ನು ಕಾಯುತ್ತಾ ಕುಳಿತಿದೆ.

ಯುದ್ಧ ಎಷ್ಟೇ ಘನಘೋರವಾದರೂ ಅದರ ಬಹುತೇಕ ಕಷ್ಟ ನಷ್ಟಗಳು ರಷ್ಯಾ ಮತ್ತು ಉಕ್ರೇನ್ ನೆಲದಲ್ಲಿಯೇ ಸಂಭವಿಸಬೇಕು ಅಲ್ಲಿಂದ ಆಚೆ ಬರಬಾರದು ಎಂಬ ರಣತಂತ್ರ ಸಹ ಇದರಲ್ಲಿ ಅಡಗಿರುವ ಸಾಧ್ಯತೆ ಇದೆ.

ಹಾಗೆಂದು ಇದು ರಷ್ಯಾ ಪರವಾದ ಲೇಖನವಲ್ಲ. ರಷ್ಯಾದ ಅಧ್ಯಕ್ಷ ಪುಟಿನ್ ಒಂದು ಕೆಟ್ಟ ಸರ್ವಾಧಿಕಾರಿ. ತನ್ನ ನೆರೆಯ ಸ್ವತಂತ್ರ ರಾಷ್ಟ್ರವನ್ನು ಮತ್ತು ಅಲ್ಲಿನ ಜನರ ವಿಶ್ವಾಸವನ್ನು ಗಳಿಸಲು ವಿಫಲವಾಗಿದ್ದಾನೆ. ತನ್ನ ಸೈನಿಕ ಶಕ್ತಿಯ ಅಹಂಕಾರದಿಂದ ಉಕ್ರೇನ್ ನ ಅಮಾಯಕ ಜನರ ಸಾವಿಗೆ ಕಾರಣವಾಗಿರುವುದಲ್ಲದೇ ತನ್ನದೇ ದೇಶದ ಜನರನ್ನು ಅತ್ಯಂತ ಅಪಾಯಕ್ಕೆ ಸಿಲುಕಿಸಿದ್ದಾನೆ. ಮೂರನೆಯ ಶಕ್ತಿಯೊಂದು ತನ್ನ ನೆಲಕ್ಕೆ ಪ್ರವೇಶಿಸಲು ಅವಕಾಶ ಕಲ್ಪಿಸಿದ್ದಾನೆ.

ಉಕ್ರೇನ್ ಮೇಲಿನ ಆತನ ದಾಳಿಯು ಇಲ್ಲಿಯವರೆಗೆ ನಿರೀಕ್ಷಿತ ಫಲಿತಾಂಶ ಪಡೆಯಲು ಸಾಧ್ಯವಾಗಿಲ್ಲ. ಈಗ ಆತ ಹಿಂದಕ್ಕೂ ಸರಿಯಲು ಸಾಧ್ಯವಾಗದೆ ಹತಾಶನಾಗಿ ತನ್ನ ಬಳಿ ಇರುವ ಅಣುಬಾಂಬು ಮತ್ತು ಹೈಡ್ರೋಜನ್ ಬಾಂಬುಗಳ ಮೇಲೆ ಸಂಪೂರ್ಣ ಅವಲಂಬಿತನಾಗಿದ್ದಾನೆ. ಅದನ್ನೇ ವಿಶ್ವಕ್ಕೆ



ಬೆದರು ಬೊಂಬೆಯಾಗಿ ಪ್ರದರ್ಶಿಸುತ್ತಿದ್ದಾನೆ..

ಒಂದು ವೇಳೆ ರಷ್ಯಾ ಭೀಕರ ಬಾಂಬುಗಳನ್ನು ಉಕ್ರೇನ್ ಸೇರಿ ಬೇರೆ ದೇಶದ ಮೇಲೆ ಪ್ರಯೋಗಿಸಿ ಅಪಾರ ಪ್ರಾಣ ಹಾನಿ ಮಾಡಿದರೂ ತಾನು ಸಹ ಅಣುಬಾಂಬಿನ ಹೊಡೆತಕ್ಕೆ ಸಿಲುಕುವುದಲ್ಲದೇ ಬಹುತೇಕ ವಿನಾಶದ ಅಂಚಿಗೆ ಬಂದು ತಲುಪುತ್ತದೆ. ಇನ್ನೆಂದೂ ಈಗಿನಷ್ಟು ಪ್ರಬಲವಾಗಲು ಸಾಧ್ಯವಿಲ್ಲ.

ಈ ನಡುವೆ ಉಕ್ರೇನ್ ಸಂಪೂರ್ಣ ನಾಶವಾಗಿರುತ್ತದೆ.

ಇದು ಮಾನವ ಸಮಾಜ. ಇಲ್ಲಿ ಪ್ರೀತಿ ಕರುಣೆ ದಯೆ ಕ್ಷಮಾಗುಣ ಉಪಕಾರ ಸಹಕಾರ ಮಾನವೀಯತೆ ಕೇವಲ ಒಣ ಉಪದೇಶಗಳು. ಇಲ್ಲಿ ಶಕ್ತಿ ಸಾಮರ್ಥ್ಯ ಪ್ರತಿಷ್ಠೆ ಅಹಂಕಾರ ದರ್ಪ ದೌರ್ಜನ್ಯ ದುರ್ಬಲರ ಶೋಷಣೆ ಅಸೂಯೆ ಪಿತೂರಿ ಇವುಗಳೇ ವ್ಯಾವಹಾರಿಕ ಜಗತ್ತಿನಲ್ಲಿ ಮೇಲುಗೈ ಪಡೆಯುವುದು......

ಜಗತ್ತಿನ ಅಸಂಖ್ಯಾತ ಜನ ಯುದ್ಧದ ಭೀಕರ ಪರಿಣಾಮಗಳ ಅರಿವಿದ್ದರೂ, ಅದು ತನ್ನನ್ನೇ ಸುಡಬಹುದು ಎಂದು ತಿಳಿದಿದ್ದರೂ ಸದ್ಯಕ್ಕೆ ಯಾವುದೇ ಹೆಚ್ಚಿನ ಪ್ರತಿಕ್ರಿಯೆ ನೀಡದೆ ತಮ್ಮ ಪಾಡಿಗೆ ತಾವು ತಮ್ಮ ಕುಟುಂಬದ ಅಥವಾ ಬದುಕಿನ ಅನಿವಾರ್ಯ ಲಾಲನೆ ಪಾಲನೆಯ ಒತ್ತಡದಲ್ಲಿ ಮುಳುಗಿದ್ದಾರೆ. ಕೊಳ್ಳುಬಾಕ ಕಾರ್ಪೊರೇಟ್ ಸಂಸ್ಕೃತಿ ಮನುಷ್ಯನ ಸ್ಪಂದನೆಯ ಗುಣವನ್ನೇ ನಾಶ ಮಾಡಿ ಸ್ವಾರ್ಥ ಬೆಳೆಸಿದೆ. ಅದರ ಪರಿಣಾಮ ಮುಂದಿನ ದಿನಗಳಲ್ಲಿ.........

**–ವಿವೇಕಾನಂದ ಹೆಚ್.ಕೆ**

# ಗಣಿತದೊಳಗಿನ ಆಧ್ಯಾತ್ಮಿಕತೆ

*–ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ*

ಗಣಿತದ ಸಮರ್ಪಕ ಜ್ಞಾನ ಮತ್ತು ಪ್ರಜ್ಞೆಗಳಿದ್ದರೆ ಮಾತ್ರ ಭಗವಂತನ ಸ್ವರೂಪವಾಗಿರುವ ಅದೃಶ್ಯ ಸಂಖ್ಯೆಗಳನ್ನು ಅನುಭವಿಸಲು ಸಾಧ್ಯ. ಅದೇ ರೀತಿ ಭಗವಂತನ ಬಗೆಗೆ ಜ್ಞಾನ, ಪ್ರಜ್ಞೆ ಮತ್ತು ಭಕ್ತಿ ಇದ್ದರೆ ಮಾತ್ರ ಭಗವಂತನ ಅಸ್ತಿತ್ವವನ್ನು ಅನುಭವಿಸಲು ಸಾಧ್ಯ. ಭಗವಂತನ ಮೇಲೆ ಭಕ್ತಿ ಇಲ್ಲದವರು (ನಾಸ್ತಿಕರು) ಭಗವಂತನ ಅಸ್ತಿತ್ವವನ್ನು ಅನುಭವಿಸಲು ಹೇಗೆ ಸಾಧ್ಯ? ಭಗವಂತನ ಕಡೆಗೆ ಆಕರ್ಷಿತರಾಗದೇ ಭಗವಂತನಿಗೆ ಭಕ್ತಿಯನ್ನು ಸಮರ್ಪಿಸದೇ 'ದೇವರೆಂಬುದಿಲ್ಲ' ಎನ್ನುವ ನಾಸ್ತಿಕರನ್ನು ಮೂರ್ಖರೆನ್ನದೆ ಇನ್ನೇನೆಂದು ಕರೆಯಬಹುದು.ಸೊನ್ನೆ ಅಥವಾ ಶೂನ್ಯತೆ ಎಂದರೆ ಯೋಚನಾರಹಿತ ಸ್ಥಿತಿ ನಾವು ಧ್ಯಾನ ಮಾಡುವಾಗ ನಮ್ಮ ಯೋಚನೆಯ ತೀವ್ರತೆಯನ್ನು ಕಡಿಮೆ ಮಾಡುತ್ತಾ ಹೋಗಿ ಯೋಚನಾರಹಿತ ಸ್ಥಿತಿಯನ್ನು ಅನುಭವಿಸಲು ಸಾಧ್ಯವಾದರೆ ವಿಶ್ವಶಕ್ತಿ (ಭಗವಂತ)ಯ ಪರಿಚಯವಾಗ ದಿರದು ಶೂನ್ಯದಿಂದ ನಾವು ಏನನ್ನು ಸೃಷ್ಟಿಸಲು ಸಾಧ್ಯವಿಲ್ಲದಿದ್ದರೂ ಬ್ರಹ್ಮಾಂಡದ ಸೃಷ್ಟಿಯ ಮೂಲ ಯಾವುದು? ಸೂನ್ಯತೆಯೇ ಆಗಿರಬೇಕು ತಾನೆ? ಯೋಚಿಸಬೇಕಾದ ವಿಚಾರ.

ನೈತಿಕತೆಯು ಆಧ್ಯಾತ್ಮದ ಒಂದು ಪ್ರಮುಖ ಭಾಗವೇ ಆಗಿರುವುದರಿಂದ ಗಣಿತದ ಚಿಹ್ನೆಗಳ ಗುಣಾಕಾರದಲ್ಲಿ ಗಹನವಾದ ನೈತಿಕ ಪಾಠವನ್ನು ಕಲಿಯಬಹುದಾಗಿದೆ. ಎಲ್ಲರಿಗೂ ತಿಳಿದಿರುವಂತೆ + X + = + ಇಲ್ಲಿ ಮೂರು + ಚಿಹ್ನೆಗಳಿವೆ ಮೊದಲನೇ + ಒಳ್ಳೆಯ ಕೆಲಸವನು ಎರಡನೇ + ಮಾಡುತ್ತಿರುವ ಸಂಕೇತವನ್ನು ಸೂಚಿಸಿದರೆ, ಮೂರನೇ + ಅದರ ಪರಿಣಾಮ ಒಳ್ಳೆಯದೇ ಆಗುವುದೆಂಬುದನ್ನು ಸೂಚಿಸುತ್ತದೆ. + X + = + ಎಂದರೆ ಒಳ್ಳೆಯ ಕೆಲಸವನ್ನು ಮಾಡಿದಾಗ ಪರಿಣಾಮ ಒಳ್ಳೆಯದೇ ಆಗುತ್ತದೆ ಎಂದು ಅರ್ಥ. ಅದೇ ರೀತಿ + X – = – ಅಂದರೆ ಒಳ್ಳೆಯ ಕೆಲಸ (+) ವನ್ನು ಮಾಡದಿದ್ದರೇ (–) ಪರಿಣಾಮ ಕೆಟ್ಟದ್ದು(–) ಆಗಿರುತ್ತದೆ. – * + = – ಅಂದರೆ ಕೆಟ್ಟ ಕೆಲಸ(–) ವನ್ನು ಮಾಡಿದಾಗ (+) ಪರಿಣಾಮ ಕೆಟ್ಟದ್ದು(–) ಆಗಿರುತ್ತದೆ ಎಂದು ಅರ್ಥ. – X – = + ಅಂದರೆ ಕೆಟ್ಟ ಕೆಲಸ (–)ವನ್ನು ಮಾಡದಿದ್ದಾಗ (–) ಪರಿಣಾಮ ಒಳ್ಳೆಯದು (+) ಆಗಿರುತ್ತದೆ ಎಂದು ಅರ್ಥ.

ಗಣಿತದ ಚಿಹ್ನೆಗಳು ಬದುಕುವ ರೀತಿಯನ್ನು ಬದುಕಿನ ದಾರಿಯನ್ನು ತೋರಿಸುವ ರೀತಿಗೆ ಆಶ್ಚರ್ಯವಾಗುತ್ತದೆ.

ಒಳ್ಳೆಯ ಕೆಲಸವನ್ನು ಮಾಡಲು ಪ್ರೋತ್ಸಾಹಿಸುವ, ಕೆಟ್ಟ ಕೆಲಸವನ್ನು ಮಾಡಿದರೆ ಪರಿಣಾಮವು ಕೆಟ್ಟದ್ದೇ ಆಗಿರುತ್ತದೆ ಎಂಬುದಾಗಿ ನಿರ್ದೇಶಿಸುವ ಚಿಹ್ನೆಗಳು ಭಗವಂತನ ಸಂದೇಶವಾಹಕಗಳಂತೆ ವರ್ತಿಸುವ ಭಾಸವಾಗುತ್ತದೆ. ಗಣಿತದ ಚಿಹ್ನೆಗಳು, ಸಂಖ್ಯೆಗಳು ಆತ್ಮಕ್ಕೆ ಸಂಸ್ಕಾರವನ್ನು ನೀಡುತ್ತದೆ ಎಂದಾದರೆ ಗಣಿತದುಳಗಿನ ಆಧ್ಯಾತ್ಮಿಕತೆಗೆ ಪುಷ್ಟಿ ಕೊಟ್ಟಂತಾಯಿತ್ತಲ್ಲವೆ?

ಧನ್ಯವಾದಗಳು

## ಗಣೇಶನ ಹಾಡು

### "ಮೂಡಲ ದೊಡ್ಡಿಯ ದಕ್ಷಿಣಾಮೂರ್ತಿ ಸಹಿತ ಮಹಾಗಣಪತಿ ದೇವಸ್ಥಾನ ಕುರಿತು"

ಮೂಡಲ ದೊಡ್ಡಿಲಿ ಮೂಡಿದ ಗಣಪನೇ
ನಿನಗಿದೊ ನಮ್ಮಯ ಆರಾಧನೆ।
ಸಕಲ ದುರಿತಗಳ ನೀಗುವ ದೇವನೆ
ನಿನಗಿದೊ ನಲ್ಮೆಯ ಅಭಿವಂದನೆ ।ಪ।

ದಕ್ಷಿಣ ಮೂರ್ತಿಯ ಜೊತೆಗಿರೆ ನೀನು
ನಮ್ಮಯ ಗೆಲುವಿನ ಆಧಾರ।
ಸಕಲ ದುರಿತಗಳ ನೀಗುವ ದೇವನೆ
ನಿನಗಿದೊ ನಲ್ಮೆಯ ಅಭಿವಂದನೆ । ಪ।

ದಕ್ಷಿಣ ಮೂರ್ತಿಯ ಜೊತೆಗಿರೆ ನೀನು
ನಮ್ಮಯ ಗೆಲುವಿನ ಆಧಾರ।
ಮಕ್ಕಳ ವಿದ್ಯೆಯ ಪ್ರಗತಿ ಎಂದೂ
ವಿಘ್ನ ವಿನಾಯಕ ಪರಿಹಾರ ॥1॥

ಕರಿಮುಖದವನೇ ಕರುಣಾಸಾಗರ
ಕರಹಿಡಿದೆಮ್ಮ ಮುನ್ನಡೆಸು
ಕೊಪ್ಪದ ಗಣಪನೇ ಕೋಟಿಸೂರ್ಯಪ್ರಭೆ
ಜಗದಗಲಕೆ ನೀ ಆವರಿಸು ॥2॥

ಶ್ರೀಪತಿ ಶಾಲೆಯ ಆವರಣದಲೀ
ಮಂದಹಾಸವನೆ ಬೀರುತಿರು ।
ಆದಿ ಪೂಜಿತ ಸಕಲ ವಂದಿತಾ
ಯಶದ ಹಾದಿಯನೆ ತೋರುತಿರು ॥ 3 ॥

ಒಂಭತ್ತು ಮೆಟ್ಟಿಲನೇರಿ ಕುಳಿತಿಹ
ಓಂಕಾರ ರಾಪನೆ ಜೈ ಗಣಪ।
ಸಕಲ ಭಾಗ್ಯವ ಕರುಣಿಸು ದೇವಾ
ವಂದಿಪೆ ನಿನಗೇ ಅನವರತ ॥ 4॥

ಶಿವನ ಬೆಟ್ಟದಾ ತಪ್ಪಲಿನಲಿ ನೀ
ಸನ್ನಿಧಿಯನ್ನು ಪಡೆದಿರುವೆ।
ಶುದ್ಧ ಭಕ್ತಿಗೆ ಶ್ರದ್ಧೆ ಸೇವೆಗೆ
ಹೃದಯವನು ಹಗುರಾಗಿಸುವೆ ॥ 5 ॥

ಚೌಕಾಕಾರದ ಆಯುಧ ಹದದಲಿ
ಆಲಿಯವನ್ನು ಗುರುತಿಸಿದೆ।
ಗಿರಿಜಾ ಸುತನೇ ಶಿವನ ಮೂರ್ತಿಯೇ
ಮಂಡ್ಯವ ಮಣ್ಣಲಿ ನೆಲೆಯಾದೆ ॥ 6 ॥

ಪಂಚ ಹಳ್ಳಿಯ ನಡುವೆ ನೆಲೆಸಿದ
ಪರಮ ದಯಾಳು ಶ್ರೀ ಗಣಪ
ಪಂಚಾಮೃತವನ್ನು ಅಭಿಷೇಕ ಮಾಡುವೆ
ತಪ್ಪದೆ ಕಾಯೋ ಹರನಸುತ ॥ 7 ॥
ಅನಂತ ಕುಮಾರ ಸ್ವಾಮಿಯ ಕನಸಿಗೆ

ನಿನ್ನಯ ಶಕ್ತಿಯೇ ಆಧಾರ
ಚರಣವ ಮುಟ್ಟೆ ಶಿರವನು ಇಡುವೆ
ಕೊಡು ನೀ ಶುಭದ ಸಾಕಾರ ॥ 8 ॥

ಮೂಡಲ ದೊಡ್ಡಿಲಿ ಮೂಡಿದ ಗಣಪನೇ
ನಿಮಗಿದೊ ನಮ್ಮಯ ಆರಾಧನೆ
ನಿಮಗಿದೊ ನಮ್ಮಯ ಆರಾಧನೆ.



– ಪಿ. ಚಕ್ರೀನಂದನ್,
ಶಿಕ್ಷಕರು
ಅಭಿನವ ಭಾರತಿ ಪ್ರೌಢಶಾಲೆ
ಮಂಡ್ಯ.

# ಗುರು ಭಕ್ತಿ

ಇಂದಿನ ಪೀಳಿಗೆಯ ವಿದ್ಯಾರ್ಥಿಗಳಲ್ಲಿ ನಶಿಸುತ್ತಿರುವ ಗುರುಭಕ್ತಿ ಶಿಕ್ಷಣ ವ್ಯವಸ್ಥೆಯ ಕಾರಣವೋ? ಇಲ್ಲವೇ ಪೋಷಕರ ಮನೋಧೋರಣೆಯೋ? ಮಾಧ್ಯಮಗಳ ಪ್ರಭಾವವೋ?

ವಿದ್ಯಾರ್ಥಿಗಳಲ್ಲಿ ಗುರುಗಳ ಬಗ್ಗೆ ಇಲ್ಲ ಕೊಂಚವೂ ಗೌರವ! ಅಂದಿನ ವಿದ್ಯಾರ್ಥಿಗಳೆಲ್ಲಿ? ಇಂದಿನ ವಿದ್ಯಾರ್ಥಿಗಳಲ್ಲಿ? ಗುರು ಬರುವಾಗ ತಲೆಬಗ್ಗಿಸಿ ನಡೆಯುತ್ತಿದ್ದೆವು. ನಾವು ಆಗ। ಗುರು ಬರುತ್ತಿದ್ದರೂ ಕಾಣದ ಹಾಗೆ ಹೋಗುವರು ಈಗ!

ಗುರು ದಂಡನೆಯ ಪ್ರಸಾದವೆನ್ನುತ್ತಿದ್ದರು ಆಗ। ಗುರು ದಂಡನೆಯ ಪ್ರಮಾದವೆನ್ನುವರು ಈಗ। ನಯ ವಿನಯ ಸಂಸ್ಕೃತಿಗಳಿಕೆಯೇ ಮೊದಲ ಸ್ಥಾನದಲ್ಲಿ ಇರುತ್ತಿತ್ತು ಆಗ। ಅಂಕ ಗಳಿಕೆಯೆ ಮೊದಲ ಸ್ಥಾನ ಪಡೆದಿಹುದು ಈಗ।

ಇಷ್ಟಾದರೂ ಗುರುಗಳನ್ನು ನೆನೆಸಿಕೊಳ್ಳುವುದಿಲ್ಲ ಈಗ। ಗುರುವೆಂಬ ದೈವ ರೂಪದ ಬೆಲೆ ಗೌರವ ಕಡಿಮೆಯಾಗುತ್ತಿರುವುದನ್ನು ನೋಡಿದರೆ ಸಹಿಸಿಕೊಳ್ಳಲಾಗುತ್ತಿಲ್ಲ. ನನ್ನ ಮನಕ್ಕೀಗ। ಬದಲಾಗಿಲ್ಲ ಕಾಳ ಬದಲಾಗಿರುವುದು ಮನುಜರು ಕೇಳ।



ಶರತ್ ಕುಮಾರ್ ಬಿ.ಎಸ್.
ಶಿಕ್ಷಕರು, ಅಭಿನವ ಭಾರತಿ
ವಿದ್ಯಾಕೇಂದ್ರ, ಕನ್ನಡ ಮಾಧ್ಯಮ,
ಮಂಡ್ಯ.





# ದಂಪತಿಗಳ ಕಲಾ ಪಯಣ

ವಿದ್ವಾನ್ ॥ ಶ್ರೀ ಯೋಗೇಶ್ ಕುಮಾರ್ ಹಾಗೂ ವಿದುಶ್ರೀ ಸ್ನೇಹಾ ನಾರಾಯಣ್ – ಹೊಸ ತಲೆಮಾರಿನ ಯುಗಳ ನೃತ್ಯಗಾರರು. ಈರ್ವರೂ ಸಮರ್ಥ ಗುರುಗಳ ಮಾರ್ಗ ದರ್ಶನದಲ್ಲಿ ಅತ್ಯಂತ ಶಿಸ್ತಿನ ಮತ್ತು ಶ್ರದ್ಧಾಪೂರ್ವಕವಾದ ಹಲವಾರು ವರ್ಷಗಳ ಕಲಿಕೆಯಿಂದ, ಇಂದು, ಪ್ರವರ್ಧಮಾನಕ್ಕೆ ಬರುತ್ತಿರುವ ಯುವ ನೃತ್ಯಗಾರರೆಂದು ಹೆಸರು ಮಾಡಿರುತ್ತಾರೆ.

ನಮಸ್ಕಾರ, ಯೋಗೇಶ್ ಕುಮಾರ್ ಹಾಗೂ ಸ್ನೇಹಾ ನಾರಾಯಣ್ ಅವರಿಗೆ.

ನಿಮ್ಮ ಬಗ್ಗೆ ಹಾಗೂ ನಿಮ್ಮ ಕಲೆಯ ಜೀವನದ ಬಗ್ಗೆ ಸ್ವಲ್ಪವಾಗಿ ಕೇಳಿದ್ದೇವೆ. ಇನ್ನೂ ಹೆಚ್ಚು ನಿಮ್ಮ ಹಾಗೂ ನಿಮ್ಮ ಕಲಾ ಬದುಕಿನ ಬಗ್ಗೆ ತಿಳಿಯಲು ಉತ್ಸುಕರಾಗಿದ್ದೇವೆ.

**1. ನೀವು ಎಷ್ಟು ವರ್ಷದಿಂದ ಭರತನಾಟ್ಯವನ್ನು ಅಭ್ಯಾಸ ಮಾಡುತ್ತಿದ್ದೀರಿ? ಹೇಗೆ ಇದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೀರಿ?**

ಕಲೆ ಎಂಬುದು ಒಂದು ಸಾಧನಾ ಪಥ. ನಾವು ನಮ್ಮ ಚಿಕ್ಕ ವಯಸ್ಸಿನಿಂದಲೇ ನಮ್ಮ ಪೋಷಕರ ಪ್ರೋತ್ಸಾಹ ದೊಂದಿಗೆ ಹಾಗೂ ಗುರುಗಳ ಆಶೀರ್ವಾದದೊಂದಿಗೆ ನೃತ್ಯವನ್ನು ಕಲಿಯಲು ಆರಂಭಿಸಿದೆವು. ಅನೇಕ ವ ರ್ಷಗಳ ಪರಿಶ್ರಮದಿಂದ ಮಾತ್ರವೇ ಭರತನಾಟ್ಯದಂತಹ ಕಲೆಯಲ್ಲಿ ಉನ್ನತಿಯನ್ನು ಪಡೆಯಲು ಸಾಧ್ಯ. ನಾವು ಇಪ್ಪತ್ತೈದು ವರ್ಷಗಳಿಂದ ಅಭ್ಯಸಿಸುತ್ತಾ, ಭರತನಾಟ್ಯವನ್ನು ನಮ್ಮ ಜೀವನ ವೃತ್ತಿಯಾಗಿ ಸ್ವೀಕರಿಸಿದ್ದೇವೆ. ನರ್ತಕರಿಗೆ ಅತ್ಯಂತ ಅಗತ್ಯವೆನಿಸುವ ಬದ್ಧತೆ, ಜೀವನಶೈಲಿ ವ್ಯಾಯಾಮಗಳು ಹಾಗೂ ಭರತನಾಟ್ಯದಲ್ಲಿನ ಪ್ರಾರಂಭಿಕ ಅಭ್ಯಾಸದ ಕ್ರಮಗಳಲ್ಲಿ ಆಳವಾದ ಪರಿಶ್ರಮವನ್ನು ಪಡೆದು ಇಂದು ನಮ್ಮದೇ ಆದ ಸಂಸ್ಥೆಯನ್ನು ಸ್ಥಾಪಿಸಿದ್ದೇವೆ. ನೃತ್ಯ ಪ್ರದರ್ಶನಗಳ ಮೂಲಕ ರಸಿಕರ ಮನಸ್ಸಂತೋಷದಲ್ಲಿ ನಮ್ಮ ಸಂತೋಷವನ್ನು ಕಾಣುವುದಲ್ಲದೆ, ಮುಂದಿನ ಪೀಳಿಗೆಗೆ ಇಂತಹ ಅಮೂಲ್ಯ ಕಲೆಯನ್ನು ಹೇಳಿಕೊಡುವಲ್ಲಿಯೂ ನಿರತರಾಗಿದ್ದೇವೆ. ಇದಕ್ಕೆ ಪೂರಕವಾಗಿ ನಮ್ಮ ಶೈಕ್ಷಣಿಕ ಹಾಗೂ ವೃತ್ತಿಪರ ಅರ್ಹತೆಗಳು ಹೀಗಿವೆ.

* ಭರತನಾಟ್ಯದಲ್ಲಿ ಎಂ.ಎ (ಸ್ನಾತಕೋತ್ತರ), ವಿದ್ವತ್ ಹಾಗೂ ವಿಶಾರದ ಪದವಿ.
* ದೂರದರ್ಶನದ 'A' ಶ್ರೇಣಿ ಕಲಾವಿದರು
* ದೆಹಲಿ ಸಾಂಸ್ಕೃತಿಕ ಮಂತ್ರಾಲಯದ (ICCR) ಹಾಗೂ (CCRT) ಕಲಾವಿದರು.
* ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ (South Zone Cultural Center) ನಿಂದ 'ಯಂಗ್ ಟ್ಯಾಲೆಂಟೆಡ್ ಆರ್ಟಿಸ್ಟ್' ಗೌರವಾನ್ವಿತೆ.

**2. ಭರತನಾಟ್ಯವನ್ನು ಕಲಿಯುವುದರಿಂದ ಏನು ಪ್ರಯೋಜನ?**

ಭರತನಾಟ್ಯವು ದಕ್ಷಿಣ ಭಾರತದ ಜನಪ್ರಿಯ ಶಾಸ್ತ್ರೀಯ ನೃತ್ಯ ಪ್ರಕಾರವಾಗಿದೆ. ಭರತನಾಟ್ಯವು ಸಂಗೀತ ಮತ್ತು ನೃತ್ಯಗಳ ಸಮಾಗಮವಾಗಿದ್ದು ನೋಡುಗರಿಗೆ ವಿಭಿನ್ನ ಅನುಭವ ನೀಡುತ್ತದೆ. ಹೆಚ್ಚಾಗಿ ಭರತನಾಟ್ಯ ಪ್ರದರ್ಶನವು ನಮ್ಮ ಭಾರತೀಯ ಪುರಾಣೇತಿಹಾಸಗಳ ಪ್ರಸಂಗ ಗಳಿಂದಾಯ್ದ ಕಥಾಭಾಗವನ್ನು ಆಧರಿಸಿರುತ್ತದೆ. ನೋಡುಗರ ಚಿತ್ತವನ್ನು ಸೆಳೆದು ತನ್ಮೂಲಕ ಸದ್ವಿದ್ಯೆ, ಸಚ್ಚರಿತದ ಕಡೆಗೆ ಮನಸ್ಸನ್ನು ಹದಗೊಳಿಸಬಲ್ಲ ಶಕ್ತಿ ಭರತನಾಟ್ಯಕ್ಕಿದೆ.

ನ ತತ್ ಜ್ಞಾನಂ ನ ತತ್ ಶಿಲ್ಪಮ್ ನ ತತ್ ಕರ್ಮ ನಾಸಾ ವಿದ್ಯಾ ನ ಸಾ ಕಲಾ ನಾಟ್ಯೇಸ್ಮಿನ್ ಯನ್ನದರ್ಶತೆ.

ನಾಟ್ಯಶಾಸ್ತ್ರ ಉದ್ಗ್ರಂಥದ ಕರ್ತೃ ಭರತಮುನಿಯೇ ಹೇಳಿರುವಂತೆ ನಾಟ್ಯ ಕಲೆಯು ಒಂದು ಬೃಹತ್ ಜ್ಞಾನ ಭಂಡಾರ. ನಾಟ್ಯಕಲಿಕೆಗೆ ತೊಡಗಿದವರು ಲೋಕದ ಎಲ್ಲಾ ರೀತಿಯ ಜ್ಞಾನವನ್ನು ಹೊಂದಿರುವುದು ಅತ್ಯಾವಶ್ಯಕ.

ಭರತನಾಟ್ಯದ ಕಲಿಕೆ ನಮ್ಮಲ್ಲಿ ಜೀವನೋತ್ಸಾಹವನ್ನು ಹೆಚ್ಚಿಸುತ್ತದೆ. ಮೊದಲೇ ಹೇಳಿದಂತೆ ಭರತನಾಟ್ಯದಲ್ಲಿ ಪ್ರಮುಖವಾಗಿ ನಮ್ಮ ಪುರಾಣ ಹಾಗೂ ಇತಿಹಾಸಗಳ ಕಥೆಗಳು ಪ್ರದರ್ಶಿಸಲ್ಪಡುತ್ತವೆ. ಕಥೆಗಳಲ್ಲಿ ಬರುವಂತಹ ಒಂದೊಂದು ಪಾತ್ರವನ್ನೂ ನಾವು ಆ ಪಾತ್ರಿಯೇ ಆಗಿ ನಿರ್ವಹಿಸಬೇಕಾಗುತ್ತದೆ. ಅಂದರೆ, ನಮ್ಮತನವನ್ನು ಕಳಚಿ

ನಾವು ಆ ಕತೆಯಲ್ಲಿ ಲೀನವಾಗಿ, ಆಯಾ ಪಾತ್ರವನ್ನು ಶ್ರದ್ಧೆಯಿಂದ ನಿರ್ವಹಿಸಿದರೆ ದೇಹ ಹಾಗೂ ಮನಸ್ಸಿನ ವಿಕಾಸ ಉಂಟಾಗುತ್ತದೆ. ಹಾಗಾಗಿ ಭರತನಾಟ್ಯವನ್ನ ದೈವೀಕ ಕಲೆ ಎಂದು ಹೇಳುತ್ತೇವೆ. ಭರತನಾಟ್ಯ ಕಲಿಕೆಯಿಂದ ನಮ್ಮ ದೇಹ ಹಾಗೂ ಮನಸ್ಸಿನ ಸ್ವಾಸ್ಥ ಸಮತೋಲಗಳನ್ನು ಕಾಯ್ದುಕೊಳ್ಳಲು ಸಾಧ್ಯ. ದೇಹದಂಡನೆಯಿಂದ ಶಕ್ತಿ ವರ್ಧನೆಯಾಗುತ್ತದೆ. ಜೀವನದ ಮೌಲ್ಯಗಳು ಭರತನಾಟ್ಯ ಕಲಿಕೆಯಿಂದ

ದ್ವಿಗುಣಗೊಳ್ಳುತ್ತವೆ.

**3. ನೀವು ಹೊಸರೀತಿಯಲ್ಲಿ ಸಂಯೋಜಿಸಿರುವ ನೃತ್ಯ ಪ್ರದರ್ಶನ ವಿವರವನ್ನು ತಿಳಿಸಿ.**

ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ

ಇದು ಕವಿಕುಲಗುರು ಕಾಳಿದಾಸನ ಮಾತು. ಭಿನ್ನ ಭಿನ್ನ ಆಬಿರುಚಿಯುಳ್ಳ ಜನರನ್ನು ಸೆಳೆಯುವ ಶಕ್ತಿ ನಾಟ್ಯಕ್ಕಿದೆ. ಲೋಕದ ಆಗುಹೋಗುಗಳನ್ನೇ ನೋವು ನಾಟ್ಯದಲ್ಲಿ ಬಿಂಬಿಸುತ್ತೇವೆ. ಹೀಗೆ ಇದರ ಬಗ್ಗೆಯೇ ಆಲೋಚಿಸುತ್ತಿರುವಾಗ, ಮಾನುಷ ಜೀವನದ ವಿವಿಧ ಅವಸ್ಥೆಗಳನ್ನು ಯಾಕೆ ನೃತ್ಯಮಾಧ್ಯಮದಲ್ಲಿ ಪ್ರಸ್ತುತಪಡಿಸಬಾರದು ಎಂಬ ಪ್ರಶ್ನೆ ಮೂಡಿತು. ನಮ್ಮದೇ ಬಾಲ್ಯದ ಹುಡುಗಾಟ , ಯೌವನದ ಆಕರ್ಷಣೆ, ಮದುವೆಯ ನಂತರದ ಸಾಂಸಾರಿಕ ಜೀವನದ ಜವಾಬ್ದಾರಿಗಳು, ವೃದ್ಧಾಪ್ಯದ ತೊಳಲಾಟಗಳು, ಹೀಗೆ ಮನುಷ್ಯನ ವಿವಿಧ ಅವಸ್ಥೆಗಳನ್ನು ಬಿಂಬಿಸುವ ಒಂದು ನೃತ್ಯ ರೂಪಕ ಮನಸ್ಸಿನಲ್ಲಿ ಒಡಮೂಡಿತು. ಒಂದೊಂದು ಅವಸ್ಥೆಯಲ್ಲೂ ಒಂದೊಂದು ಕಥೆಯನ್ನು ಹೆಣೆದು ಸಂಯೋಜಿಸಲು ಆರಂಭಿಸಿದೆ. ಅದಕ್ಕೆ ಸರಿಯಾದ ಸಂಗೀತದ ಮಟ್ಟುಗಳನ್ನು ಹೆಣೆದಿದ್ದೂ ಆಯಿತು. ನೃತ್ಯ ಜೀವನದ ವಾರ್ಷಿಕ ಪರೀಕ್ಷೆಗೆ ನನ್ನನ್ನು ನಾನು ಒಡ್ಡಿ ಕೊಂಡಿದ್ದೇನೆ ಎಂಬುದು ಆಗಲೇ ನನಗೆ ಅರ್ಥವಾಗಿದ್ದು. ಇಷ್ಟು ವರ್ಷ ಕಲಿತಿದ್ದನ್ನು ಪ್ರಯೋಗಕ್ಕಿಳಿಸುವ, ಅರ್ಥೈಸಿಕೊಂಡ ಸಂಗತಿಗಳನ್ನು ಅರಿವಿನೊಡನೆ ಬೆರೆಸಿ ಸಮರಸಕ್ಕಿಳಿಸುವ ದೊಡ್ಡ ಜವಾಬ್ದಾರಿಯನ್ನು ನನ್ನ ತಲೆಯ ಮೇಲಿತ್ತು. ಇಂತಹ ವಿಭಿನ್ನ ರೀತಿಯ ಸಂಯೋಜನೆಯಲ್ಲಿ ತೊಡಗಿಕೊಂಡಾಗಲೇ ನಮ್ಮ ಬೌದ್ಧಿಕ ವಿಕಾಸವು ಜೊತೆ ಜೊತೆಗೇ ಸಾಧಿಸಲ್ಪಡುತ್ತದೆ ಎಂಬದು ಕೂಡ ಮನದಟ್ಟಾಯಿತು. ಹೀಗೆ "ಅವಸ್ಥಾಃ" ಎಂಬ ಶೀರ್ಷಿಕೆಯ ನೃತ್ಯ ರೂಪಕ ಪ್ರದರ್ಶನದ ಹಂತವನ್ನು ತಲುಪಿ ಗುರುಗಳ, ಶ್ರೋತೃಗಳ ಮನಗೆದ್ದಿದ್ದು ಈಗ ಇತಿಹಾಸ.

ಇದನ್ನು ನಾವು ದೇಶ ವಿದೇಶಗಳ ಅನೇಕ ಒಳ್ಳೆಯ ವೇದಿಕೆಯಲ್ಲಿ ಪ್ರದರ್ಶಿಸಿದ್ದೇವೆ. ಹಿರಿಕಿರಿಯರು, ಜಾತಿ ಮತ ಪಂಥಗಳ ಸೀಮೆಯನ್ನು ಮೀರಿದ "ಅವಸ್ಥಾಃ" ಎಲ್ಲರ ಮನಮುಟ್ಟುವ ಪರಿಯನ್ನು ಕಂಡು ಸಂತುಷ್ಟರಾಗಿದ್ದೇವೆ.

**4. ಭರತನಾಟ್ಯಕ್ಕೆ ನಿಮ್ಮ ಕೊಡುಗೆ ಏನು ?**

ಜೀವನವೇ ಒಂದು ಕಲೆ. ಆದರೆ ಕಲೆಯಲ್ಲಿಯೇ ಸರ್ವಸ್ವವನ್ನೂ ಅರಸುವ ನಮ್ಮಂತಹ ಕಲಾವಿದರಿಗೆ ಕಲೆಯೇ ಜೀವನ. ಹೀಗೆ ನಾವು ನಮ್ಮ ಜೀವನವನ್ನು ಕಲೆಗೇ ಮುಡಿಪಾಗಿಟ್ಟಿದ್ದೇವೆ. ನೃತ್ಯ ಪ್ರದರ್ಶನದಲ್ಲಿ ನಾವು ಭಾರತೀಯ ಕಾವ್ಯ, ಪುರಾಣ, ಐತಿಹಾಸಿಕ ಕಥೆಗಳನ್ನು ಬಿಂಬಿಸುವುದರ ಮೂಲಕ ಜನರಿಗೆ ಮನೋರಂಜನೆಯ ಜೊತೆಗೆ ಮನೋವಿಕಾಸವನ್ನು ಮೂಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

ಇಂತಹ ಕಲೆಯನ್ನು ಕಲಿಯುವುದರಿಂದ ಹಾಗೂ ಆಸ್ವಾದಿಸುವುದರಿಂದ ನಮ್ಮ ಆಲೋಚನೆಗಳು, ಸ್ವಭಾವಗಳು, ಜೀವನ ಮೌಲ್ಯಗಳು ವೃದ್ಧಿಸುತ್ತದೆ. ಕಲೆಯು ಸಮಾಜವನ್ನು ಉತ್ಕೃಷ್ಟ ಹಾದಿಯಲ್ಲಿ ಸಾಗುವಂತೆ ಪ್ರೇರೇಪಿಸುತ್ತದೆ. ಆ ದಿಶೆಯಲ್ಲಿ ನಾವೂ ಕೂಡ ನಮ್ಮ ಅಳಿಲ ಸೇವೆಯನ್ನು ಸಲ್ಲಿಸುತ್ತದ್ದೇವೆಂಬದು ನಮಗೆ ಸಮಾಧಾನದ ವಿಷಯ. ಈ ಸಮಾಧಾನವೇ ಸದಾ ಹೊಸ ಹೊಸ ಪ್ರಯೋಗಗಳನ್ನು ರಂಗಕ್ಕೆ ತರುವ ಸವಾಲನ್ನು ಹುರುಪಿನಿಂದ ನಿರ್ವಹಿಸುವ ತಾಕತ್ತನ್ನು ಒದಗಿಸುತ್ತದೆ. ಇಡಿಯ ಜಗತ್ತಿನಲ್ಲಿಯೇ ವಿಶಿಷ್ಟ ಹಾಗೂ ಪ್ರೇರಕವಾದ ನಮ್ಮ ಭಾರತೀಯ ಪರಂಪರೆಯನ್ನು ಸಾರುವ ಸಾಂಸ್ಕೃತಿಕ ರಾಯಭಾರಿಗಳ ಸ್ಥಾನ ನಮಗೆ ಗೊತ್ತಿಲ್ಲದೆಯೇ ನಮ್ಮ ಹೆಗಲೇರಿರುವುದು ನಮಗೊಂದು ಹೆಮ್ಮೆಯ ಸಂಗತಿ.

ನಾನು ಹಾಗೂ ಯೋಗೇಶ್ ಕುಮಾರ್ ನರ್ತನ ಯೋಗ ಹಾಗೂ ಕಲಾ ಸ್ನೇಹಿ ಎಂಬ ಟ್ರಸ್ಟ್ ಗಳನ್ನು ಸ್ಥಾಪಿಸಿ ಅದರಡಿಯಲ್ಲಿ ದೇಶ ವಿದೇಶಗಳ ಆಸಕ್ತ ಮಕ್ಕಳಿಗೆ ಭರತನಾಟ್ಯ ಶಿಕ್ಷಣವನ್ನು ನೀಡುತ್ತದ್ದೇವೆ. ತನ್ಮೂಲಕ ನಮಗೆ ತಿಳಿದಿರುವ ಈ ಬಹು ಬೇಡಿಕೆಯ ವಿದ್ಯೆಯನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ದಾರಿಯಲ್ಲಿ ಸಂತೋಷದಿಂದ ತೊಡಗಿಕೊಂಡಿದ್ದೇವೆ.



**ವಿದ್ವಾನ್ ಶ್ರೀ ಯೋಗೇಶ್ ಕುಮಾರ್**
**ವಿದುಶ್ರೀ ಸ್ನೇಹಾ ನಾರಾಯಣ್**
**ನೃತ್ಯಗಾರರು,**
**# 56, ಮೊದಲನೇ ಹಂತ, ಚಂಗಮರಾಜು ಲೇಔಟ್**
**ಜೆ.ಪಿ.ನಗರ, ಬೆಂಗಳೂರು**

# ಮಾತೃದೇವೂಭವಃ –ತಾಯಿ ದೇವರ ಕಥೆ

ತಾಜಾ ಹಣ್ಣುಗಳನ್ನು ತೆಗೆದುಕೊಳ್ಳಲೆಂದು ತುಂಬಾ ಜನಸಂದಣಿ ಇರುವ ದಾರಿಯಲ್ಲಿ ಒಂದು ಅಂಗಡಿ ಕಾಣಿಸಿತು ಅಂಗಡಿಯಲ್ಲಿ ತರತರವಾದ ಹಣ್ಣುಗಳು ಇವೆ.

ಆದರೆ ಅಂಗಡಿಯ ಯಜಮಾನ ಮಾತ್ರ ಎಲ್ಲೂ ಕಾಣಲಿಲ್ಲ. ಹಣ್ಣುಗಳ ಬೆಲೆಯನ್ನು ಕಾಗದದ ಮೇಲೆ ಬರೆದು ಇಟ್ಟಿದ್ದಾರೆ. ಅಂಗಡಿಯ ಮಧ್ಯದಲ್ಲಿ ಒಂದು ಕಾಗದದ ಚೀಟಿ ನೇತಾಡುತ್ತಿತ್ತು .

ಅದು ನನ್ನನ್ನು ಆಕರ್ಷಿಸಿ ಕುತೂಹಲದಿಂದ ಅದರಲ್ಲಿ ಬರೆದಿರುವುದನ್ನು ಓದಿದೆ "ನನ್ನ ತಾಯಿಯವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಅವರ ಸೇವೆ ಮಾಡಲು ನಾನು ಸದಾ ಅವರ ಬಳಿ ಇರಬೇಕಾಗಿದೆ" ಆದ್ದರಿಂದ ನೀವುಗಳು ನಿಮಗೆ ಬೇಕಾದ ಹಣ್ಣುಗಳನ್ನು ಪಡೆದು ಅದಕ್ಕೆ ಸರಿಯಾದ ದರವನ್ನು ಗಲ್ಲಾ ಪೆಟ್ಟಿಗೆಯಲ್ಲಿ ಹಾಕಿ ಎಂದು ಬರೆದಿತ್ತು.

ನನಗೆ ಆಶ್ಚರ್ಯವಾಯ್ತು ಈ ಕಾಲದಲ್ಲೂ ಇಂತಹ ಅಮಾಯಕರು ಇರುತ್ತಾರೆಯೇ? ಯಾರಾದರೂ ಅವನ ಗಲ್ಲಾಪೆಟ್ಟಿಗೆಯನ್ನು ದೋಚಿದರೆ? ಅವನ ಪರಿಸ್ಥಿತಿ ಏನು? ಅವನ ಅಮಾಯಕತ್ವ ಕಂಡು ನಗು ಸುಳಿಯಿತು.

ಏನಾದರೂ ಆಗಲಿ ಇವನಿಗೆ ಈ ತರಹ ಮಾಡಬಾರದೆಂದು ತಿಳಿ ಹೇಳಬೇಕೆಂದು ನಿರ್ಣಯಿಸಿ ಸಾಯಂಕಾಲ ಅಂಗಡಿಗೆ ಹಣವನ್ನು ತೆಗೆದುಕೊಳ್ಳಲು ಬರುತ್ತಾರಲ್ಲ ಆಗ ಅವನಿಗೆ ತಿಳಿ ಹೇಳಬೇಕೆಂದು ಸಾಯಂಕಾಲ ಅವನ ಅಂಗಡಿಯ ಬಳಿ ಬರುತ್ತಾನೆ. ಅಂಗಡಿಯ ಮಾಲೀಕ ಹಣವನ್ನು ತೆಗೆದುಕೊಂಡು ಅಂಗಡಿಯನ್ನು ಮುಚ್ಚಲು ಮುಂದಾಗುತ್ತಿರುತ್ತಾನೆ. ನನ್ನನ್ನು ನಾನು ಪರಿಚಯಿಸಿಕೊಂಡು ನೀನು ಎಂತಹ ಬುದ್ಧಿ ಇಲ್ಲದ ಕೆಲಸ ಮಾಡುತ್ತಿರುವೆ ತಿಳಿಯಿತೆ ನಿನ್ನ ಗಲ್ಲಾ ಪೆಟ್ಟಿಗೆಯಲ್ಲಿನ ಹಣವನ್ನು ಯಾರಾದರೂ ಕಳ್ಳರು ದೋಚಿದರೆ? ಹಣ್ಣುಗಳನ್ನು ಉಚಿತವಾಗಿ ತೆಗೆದುಕೊಂಡರೆ? ಎಂದು ಬುದ್ಧಿ ಹೇಳಲು ಹೋದರೆ ....

ಆಗ ಅವನು ಅಯ್ಯಾ "ನಾನು ಮೊದಲು ನಿಮ್ಮ ಹಾಗೆ ನಮ್ಮ ತಾಯಿಯನ್ನು ಕೇಳಿದೆ" ನಾನು ನಿನ್ನ ಸೇವೆಯಲ್ಲಿ ಇದ್ದಾಗ ಅಂಗಡಿಯ ಪರಿಸ್ಥಿತಿ ಏನು. ಅದಕ್ಕೆ ನಮ್ಮ ತಾಯಿ ನಾನು ಈಗ ಅವಸಾನದ ಸ್ಥಿತಿಯಲ್ಲಿ ಇದ್ದೇನೆ. ನಿನ್ನನ್ನು ನೋಡದೇ ಇರಲು ಆಗೋದಿಲ್ಲ ನಾನು ದೇವರನ್ನು ಪ್ರಾರ್ಥಿಸುತ್ತೇನೆ ನಾನು ಹೇಳಿದ ರೀತಿಯಲ್ಲಿ ಮಾಡು ಎಂದು ಹೇಳಿದಳು. ಆ ದಿನದಿಂದ ನಾನು ಈ ರೀತಿ ಮಾಡುತ್ತಿದ್ದೇನೆ. ಎಂದು ನಿನಗೆ ನಷ್ಟವಾಗಿಲ್ಲವೆ ಎಂದು ಕೇಳಿದನು. ಅದಕ್ಕೆ ಅವನು ಗಲ್ಲಾ ಪೆಟ್ಟಿಗೆಯನ್ನು ತೆಗೆದು ತೋರಿಸುತ್ತಾನೆ ಆಶ್ಚರ್ಯ ಅದರ ತುಂಬಾ ಹಣ. ಅಂಗಡಿಯ ಹಣ್ಣಿನ ಬೆಲೆಗಿಂತ ಹತ್ತರಷ್ಟು ಹಣ ಅದರಲ್ಲಿದೆ ಅಂಗಡಿಯಲ್ಲಿ ತರತರವಾದ ವಸ್ತುಗಳನ್ನು ತೋರಿಸಿದನು. ಅದರಲ್ಲಿ ಸೀರೆಗಳು, ಸ್ವೆಟರುಗಳು, ಆಗಲೇ ತಯಾರಿಸಿದ ಪಲಾವ್ ಅನೇಕ ತರಹದ ತಿಂಡಿ ತಿನಿಸುಗಳು ಇವೆ, ಅದರ ಮೇಲೆ ಈ ರೀತಿ ಬರೆದಿದೆ,ತಾಯಿಯವರಿಗೆ ಇವುಗಳನ್ನು ನನ್ನ ಕಡೆಯಿಂದ ಕೊಡುವುದು:

"ಅಂಕಲ್ ತಾಯಿಯವರನ್ನು ನಮ್ಮ ಹಾಸ್ಪಿಟಲ್ಗೆ ಕರೆದು" ತನ್ನಿ ನಾನು ಅವರಿಗೆ ಉಚಿತವಾಗಿ ಚಿಕಿತ್ಸೆ ನೀಡುವೆನು ಎಂದು ಬರೆದಿತ್ತು ಅವರ ವಿಸಿಟಿಂಗ್ ಕಾರ್ಡ್ ಇಟ್ಟಿದ್ದರು. ಇದನ್ನೆಲ್ಲಾ ನೋಡಿದ ನನಗೆ ಕಣ್ಣಲ್ಲಿ ನೀರಾಡಿತ್ತು. ಸಮಾಜವು ಸ್ವಾರ್ಥದಿಂದ ತುಂಬಿದೆ. ಒಳ್ಳೆಯತನ ಕಾಣುತ್ತಿಲ್ಲವೆಂದು ತಿಳಿದ ನಾನು, ಆಗ ನನ್ನ ಭಾವನೆಯಲ್ಲಾ ಹರಿದು ಚೂರಾಯಿತು ಸಮಾಜದಲ್ಲಿ ಇನ್ನೂ ಒಳ್ಳೆಯ ತನವಿದೆ. ವೊದಲು ನಾವು ನೊಡುವ ದೃಷ್ಟಿಂಯುನ್ನು ಬದಲಾಯಿಸಿಕೊಳ್ಳಬೇಕು. "ತಾಯಿಂಯು ಸೇವೆ ಮಾಡುವುದರಿಂದ ಸಾಕ್ಷಾತ್ ದೇವರೇ ಅವನ ಅಂಗಡಿಯ ಕಾವಲುಗಾರ ನಾಗಿದ್ದಾನೆ".

"ಎಷ್ಟೇ ಕೋಪಗೊಂಡರೂ ಮತ್ತೆ ನಮ್ಮ ಮೇಲೆ ಕೋಪಿಸಿ ಕೊಳ್ಳದೇ ಇರುವವರು ಈ ಸೃಷ್ಟಿಯಲ್ಲಿ ತಾಯಿಯೊಬ್ಬರೆ "ತಾಯಿಗೆ ಮಾಡುವ ಸೇವೆ" ಎಂದು ನಿರರ್ಥಕವಾಗದು.



**ಸಿದ್ದರಾಜುಗೌಡ ರಾ. ಸಿ.**
**ಬಿಜೆಪಿ ಮುಖಂಡರು, ಹೊಸಹಳ್ಳಿ, ಮಂಡ್ಯ**

# ಶಿಕ್ಷಕನಾಗಿ, ಸಂಸ್ಥೆಯ ಬಗ್ಗೆ ಅನಿಸಿಕೆಗಳು

"ನಹೀ ಜ್ಞಾನೇನ ಸದೃಶಂ" ಎಂಬ ವಾಕ್ಯದಂತೆ ಪ್ರಾರಂಭವಾದ ಅಭಿನವ ಭಾರತಿ ಶಾಲೆ ಪಠ್ಯ, ಪಠ್ಯೇತರ ಮತ್ತು ಆಧ್ಯಾತ್ಮಿಕ ವಿಚಾರಗಳ ಸಂಗಮವಾಗಿತ್ತು. ಇಂತಹ ಶಾಲೆಯಲ್ಲಿ ನಾನು ಶಿಕ್ಷಕನಾಗಿ ಸೇವೆ ಸಲ್ಲಿಸಿರುವುದು ನನ್ನ ಪುಣ್ಯವೆಂದೇ ಭಾವಿಸುತ್ತೇನೆ. ಇಲ್ಲಿ ಶಿಕ್ಷಕನಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಟ್ಟ ಈ ಶಾಲೆಯ ಸಂಸ್ಥಾಪಕರು ಕಾರ್ಯದರ್ಶಿಯೂ ಆಗಿದ್ದಂತಹ ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿಯವರ ಪಾದಕಮಲಗಳಿಗೆ ಅನಂತ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

ನಾನು 1994 ಜೂನ್ ತಿಂಗಳಿನಲ್ಲಿ ಈ ಶಾಲೆಗೆ ಶಿಕ್ಷಕನಾಗಿ ಸೇರಿದೆ. ಪ್ರಾರಂಭದಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮದ ತರಗತಿಗಳನ್ನು ನಿರ್ವಹಿಸುತ್ತಿದ್ದೆನು. ಆಗ ಆಂಗ್ಲ ಮಾಧ್ಯಮದ ಪ್ರತಿ ತರಗತಿಯಲ್ಲಿ 90 ರಿಂದ 95 ಮಕ್ಕಳಿದ್ದು, ಪಾಠ ಮಾಡುವುದು ಸವಾಲಾಗಿತ್ತು. ಆದರೆ ಸ್ವಾಮೀಜಿಯವರ ಮಾರ್ಗದರ್ಶನ ಮತ್ತು ನನ್ನ ಸಹೋದ್ಯೋಗಿ ಶಿಕ್ಷಕರ ಸಹಕಾರದಿಂದ ಅದು ಸುಲಭ ಸಾಧ್ಯವಾಯಿತು. ನಂತರ ನನ್ನ ಪಾಠ ಪ್ರವಚನಗಳು ಮಕ್ಕಳ ಮನ ಮುಟ್ಟುವಂತೆ ನಿರರ್ಗಳವಾಗಿ ನಡೆಯುತ್ತಾ ಸಾಗಿತು. ಇದು ನನಗೆ ತೃಪ್ತಿ ತಂದುಕೊಟ್ಟಿದೆ.

ಇನ್ನು ಪಠ್ಯೇತರ ವಿಚಾರಗಳ ಗಣಿಯಾಗಿದ್ದ ಈ ಶಾಲೆಯಲ್ಲಿ ಇನ್ನಷ್ಟು ಅನುಭವವನ್ನು ಪಡೆಯಲು ಸಾಧ್ಯವಾಯಿತು. ವಿದ್ಯಾರ್ಥಿ ಸಂಘದ ಉದ್ಘಾಟನೆ, ಸಮಾರೋಪ ಕಾರ್ಯಕ್ರಮಗಳು ಶಾಲೆಯ ಹಬ್ಬದಂತೆ ನಡೆಯುತ್ತಿತ್ತು. ಆ ಕಾರ್ಯಕ್ರಮಕ್ಕೆ ಮಕ್ಕಳನ್ನು ಸಿದ್ಧಪಡಿಸುವುದು ಒಂದು ಅನುಭವವೇ ಸರಿ. ಇದಲ್ಲದೆ ನಾಟಕೋತ್ಸವ, ವಿಜ್ಞಾನ ಮಾದರಿ ತಯಾರಿಕೆ ಮತ್ತು ಭಗವದ್ಗೀತೆ ಅಭಿಯಾನ ಕಾರ್ಯಕ್ರಮಗಳಲ್ಲಿ ನಮ್ಮ ಶಾಲೆಯ ವಿಜ್ಞಾನ ಶಿಕ್ಷಕರು ಹಾಗೂ ನನ್ನ ಆತ್ಮೀಯರು ಆದಂತಹ ಶ್ರೀ ಜಗನ್ನಾಥ್‌ರವರ ಜೊತೆಯಲ್ಲಿ ಕಾರ್ಯ ನಿರ್ವಹಿಸಿದುದು ಮತ್ತಷ್ಟು ಜ್ಞಾನಾನುಭವವನ್ನು ತಂದುಕೊಟ್ಟಿತು. ಮುಂದೆ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿದಾಗ ಇಬ್ಬರೂ ಸೇರಿಯೇ ಮಕ್ಕಳನ್ನು ಸಿದ್ಧಗೊಳಿಸುತ್ತಿದ್ದೆವು. ಪ್ರತಿ ಸ್ಪರ್ಧೆಯಲ್ಲೂ ಮಕ್ಕಳಿಗೆ ಬಹುಮಾನ ಬರಲೇಬೇಕು. ಒಂದು ಪಕ್ಷ ಬಹುಮಾನ ಬರದಿದ್ದರೆ ಅದರ ಬಗ್ಗೆ ಚಿಂತನೆ ನಡೆಸಿ ಮುಂದೆ ಹಾಗಾಗದಂತೆ ಎಚ್ಚರ ವಹಿಸುತ್ತಿದ್ದೆವು. ಈ ಕಾರ್ಯಕ್ರಮಗಳು ನನ್ನನ್ನು ಸದಾ ಚಟುವಟಿಕೆಯಿಂದ ಇರುವಂತೆ ಆಗುತ್ತಿತ್ತು.

ಆಧ್ಯಾತ್ಮಿಕ ವಿಚಾರಕ್ಕೆ ಸಂಬಂಧಿಸಿದಂತೆ, ಆಧ್ಯಾತ್ಮಿಕ ವಿಚಾರದರ್ಶನ ಗುರುಪೂರ್ಣಿಮ ಕಾರ್ಯಕ್ರಮಗಳು ಪ್ರತಿ ವರ್ಷವೂ ಜರುಗುತ್ತಿದ್ದವು. ಈ ಸಮಾರಂಭಕ್ಕೆ ನಮ್ಮ ನಾಡಿನ ವಿವಿಧ ಮಠಾಧಿಪತಿಗಳು, ಧರ್ಮಾಧಿಪತಿಗಳು, ಸಾಹಿತಿಗಳು, ಪ್ರವಚನಗಾರರು, ಚಿಂತಕರು ಆಗಮಿಸಿ ತಮ್ಮ ವಾಗ್ಝರಿಯ ಮೂಲಕ ನೀಡುತ್ತಿದ್ದ ವಿಚಾರಗಳು ನನ್ನ ಮನಸ್ಸಿನ ಮೇಲೆ ಪ್ರಭಾವವನ್ನು ಬೀರುತ್ತಿದ್ದವು. ಪ್ರತಿನಿತ್ಯ ಶಾಲೆಯ ಪ್ರಾರ್ಥನೆ ವೇಳೆಯಲ್ಲಿ ನಡೆಯುತ್ತಿದ್ದ ಭಗವಂತನ ನಾಮಸ್ಮರಣೆ, ಧ್ಯಾನ ಮತ್ತು ಸ್ವಾಮೀಜಿಯವರ ಪ್ರವಚನಗಳು ನಮಗೆ ಮಾರ್ಗದರ್ಶನವಾಗಿದ್ದವು. ತಮ್ಮ ಪ್ರವಚನದ ಕೊನೆಯಲ್ಲಿ ನಮ್ಮೆಲ್ಲರಿಗೂ ಒಳ್ಳೆಯದಾಗಲೆಂದು ತಾವು ನಂಬಿದ್ದ ಶ್ರೀ ವೆಂಕಟೇಶ್ವರರಲ್ಲಿ ಪ್ರಾರ್ಥಿಸುವುದು ನನಗೆ ಆನಂದವನ್ನು ಉಂಟು ಮಾಡುತ್ತಿತ್ತು. ಬಹುಶ: ಈ ರೀತಿಯ ಕಾರ್ಯಕ್ರಮ ಬೇರೆ ಯಾವ ಸಂಸ್ಥೆಯಲ್ಲೂ ನಾನು ನೋಡಿಲ್ಲ.

ಒಟ್ಟಾರೆ ಹೇಳಬೇಕೆಂದರೆ, "ಕೆಲವಂ ಬಲ್ಲವರಿಂದ ಕಲ್ತು" ಎಂಬ ಪುಲಿಗೆರೆ ಸೋಮನಾಥನ ಮಾತಿನಂತೆ ನಾನು ಹಲವು ಸನ್ನಿವೇಶಗಳ ಮುಖಾಂತರ ಜ್ಞಾನವನ್ನು ಅನುಭವವನ್ನು ಪಡೆದದ್ದು, ಮತ್ತು ಸ್ವಾಮೀಜಿಯವರ ಆಶೀರ್ವಾದ ನನಗೆ ಇದ್ದುದರಲ್ಲೇ ತೃಪ್ತಿಪಟ್ಟು ನೆಮ್ಮದಿಯ ಜೀವನವನ್ನು ಸಾಗಿಸ ುವಂತಾಯಿತು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

ಕಳೆದ 5 –6 ವರ್ಷಗಳಿಂದೀಚೆಗೆ ನಮ್ಮ ಶಾಲೆಗೆ ಶ್ರೀ ಶಿವಮೂರ್ತಿ ಕೀಲಾರರವರು ಕಾರ್ಯದರ್ಶಿಗಳಾಗಿ ಅಧಿಕಾರ ವಹಿಸಿಕೊಂಡರು. ಅವರು ಬಂದ ನಂತರ ಈ ಸಂಸ್ಥೆ ಅನೇಕ ಬದಲಾವಣೆಯನ್ನು ಕಂಡಿತು. ಅನೇಕ ವಿಭಾಗಗಳು ತೆರೆಯಲ್ಪಟ್ಟವು. ಅದಕ್ಕೆ ತಕ್ಕಂತೆ ಕಟ್ಟಡಗಳು ತಲೆಯೆತ್ತಿದವು. ಇನ್ನು ಕೆಲವು ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ. ಒಟ್ಟಾರೆ 30 ವರ್ಷಗಳಲ್ಲಿ ಸ್ವಾಮೀಜಿಯವರು ಸಾಧಿಸಿದ ಕೆಲಸಗಳನ್ನು ಕೇವಲ ಐದಾರು ವರ್ಷಗಳಲ್ಲಿ ಸಾಧಿಸಿದ್ದಾರೆ. ಇದು ಅವರು ಸ್ವಾಮೀಜಿಯವರ ಮೇಲೆ ಇರುವ ಪ್ರೀತಿ ಮತ್ತು ಅವರ ದಕ್ಷತೆಗೆ ಹಿಡಿದಿರುವ ಕನ್ನಡಿ ಎಂದು ಹೇಳಿದರೆ ತಪ್ಪಾಗಲಾರದು.

ಕರೋನ ಬಂದರೂ ಕಷ್ಟದ ಸಮಯದಲ್ಲಿ ತಮ್ಮ ಶಿಕ್ಷಕರಿಗೆ ಸಂಬಳವನ್ನು ಕೊಟ್ಟು, ಅವರಿಗೆ ಆಸರೆಯಾದುದು ಅವರ ಒಳ್ಳೆಯ ಹೃದಯವಂತಿಕೆ.

ಸ್ವಾಮಿಜಿಯವರ ಕಾರ್ಯಕ್ರಮಗಳನ್ನು ಮುಂದುವರಿಸಿ ಕೊಂಡು ಹೋಗುತ್ತಿರುವುದು ನನಗೆ ಸಂತೋಷವನ್ನುಂಟು ಮಾಡಿದೆ.


ಸ್ವಾಮೀಜಿಯವರ ಜೀವಿತಾವಧಿಯಲ್ಲೇ ಶ್ರೀಪತಿಯಲ್ಲಿ ಶ್ರೀ ಗಣಪತಿ ದೇವಸ್ಥಾನ ನಿರ್ಮಾಣ ಮತ್ತು ವೈದ್ಯಕೀಯಕ್ಕೆ ಸಂಬಂಧಪಟ್ಟಂತೆ ಬಿ.ಫಾರ್ಮ್, ಡಿ ಫಾರ್ಮ ಕಾಲೇಜುಗಳ ಸ್ಥಾಪನೆ ಮಾಡಿ ಸ್ವಾಮೀಜಿಯವರಿಗೆ ಸಂತೋಷವನ್ನುಂಟು ಮಾಡಿದ್ದಾರೆ. ಪ್ರೌಢಶಾಲೆಯ ಮಕ್ಕಳನ್ನು ಅಮೇರಿಕಾದ ನಾಸಾಗೆ ಕರೆದುಕೊಂಡು ಹೋಗಿ ಅಲ್ಲಿನ ಪರಿಚಯ ಮಾಡಿಸಿ ಕರೆದುಕೊಂಡು ಬಂದಿದ್ದು, ಮತ್ತೊಂದು ವಿಶೇಷ.

ಸ್ವಾಮಿಜಿಯವರಿಗಿಂತಲೂ ವಿಭಿನ್ನವಾಗಿ ಶ್ರೀಪತಿಯಲ್ಲಿ ಗೃಹಕೈಗಾರಿಕೆಗಳನ್ನು ಸ್ಥಾಪಿಸಿ ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ ನೀಡಿರುವುದು ಅವರ ಇನ್ನೊಂದು ವೈಶಿಷ್ಟ್ಯ.

ನಾನು ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದ ಶಾಲೆಯ ಆವರಣದಲ್ಲಿ ಭವ್ಯವಾದ ರಂಗಮಂದಿರ ಮತ್ತು ಸುಸಜ್ಜಿತವಾದ ಕೊಠಡಿಗಳು ನಿರ್ಮಾಣವಾಗುತ್ತಿರುವುದು ನನಗೆ ಸಂತೋಷವನ್ನುಂಟು ಮಾಡಿದೆ.

ಸ್ವಾಮೀಜಿಯವರ ಕಾಲಾನಂತರ ಅವರು ನಡೆಸಿಕೊಂಡು ಬಂದಂತಹ ಭಜನೆ, ಧ್ಯಾನ, ಪೂಜೆಗಳು ನಿರಂತರವಾಗಿ ನಡೆಯಲಿ ಎಂಬುದಕ್ಕಾಗಿ ಕಾಲೇಜಿನ ಆವರಣದಲ್ಲಿ ಸ್ವಾಮೀಜಿಯವರ ಹೆಸರಿನಲ್ಲಿ ಧ್ಯಾನ ಮಂದಿರವನ್ನು ನಿರ್ಮಾಣ ಮಾಡಿ ಭಜನೆ, ಯೋಗ, ನಿತ್ಯ ನಡೆಯುವಂತೆ ಮಾಡಿರುವುದು ವೈಯಕ್ತಿಕವಾಗಿ ನನಗೆ ಸಂತೋಷ ನೀಡಿದೆ.

ಶ್ರೀ ಶಿವಮೂರ್ತಿ ಕೀಲಾರರವರಿಗೆ ಆ ಭಗವಂತ ಐಶ್ವರ್ಯ, ಆರೋಗ್ಯ, ಆಯಸ್ಸನ್ನು ಕೊಡಲಿ. ಇದರಿಂದ ಈ ಸಂಸ್ಥೆ ಮತ್ತಷ್ಟು ಬೆಳೆಯಲಿ. ಅವರಿಗೆ ಇನ್ನಷ್ಟು ಶಕ್ತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.



**ವಿ.ಕಲ್ಲಪ್ಪ ಶರ್ಮಾ**
ನಿವೃತ್ತ ಕನ್ನಡ ಭಾಷಾ ಶಿಕ್ಷಕರು ಮಂಡ್ಯ.

## ವಿದಾಯ

ದಾದಾಜಿಯವರ ಪಾದದಡಿಯಲ್ಲಿ
ಶಿವಮೂರ್ತಿಜಿಯವರ ನೆರಳಿನಲ್ಲಿ
ಅಭಿನವ ಭಾರತಿಯ ಮಹಾ ಮಡಿಲಲ್ಲಿ
ನಾವು ನೀವೆಲ್ಲಾ ಅರಳುತ್ತಿದ್ದೇವ, ಇಲ್ಲಿ.

ಇದು ಮೂರು ವರ್ಷಗಳ ಪ್ರೌಢಶಾಲೆ
ನಿಮ್ಮ ಚಿತ್ತಕಂಟುವುದು ಚಿಂತೆಗಳ ಸಾಲೆ
ಕಲಿಯದಿರೆ ನೀವಾಗುವಿರಿ ಮೊಗ್ಗುಗಳಲ್ಲೆ ಕೊಲೆ
ಚೆಂದದಿ ಕಲಿತರೆ ನೀವೆಲ್ಲಾ ಹೂಗಳ ಮಾಲೆ.

ಶಿಕ್ಷಿಸಿ ಕ್ಷಮಿಸಿ ಕಲಿಸುವ ಶಿಕ್ಷಕ
ನೀವು ಕಲಿಯಲಿಲ್ಲವೆಂದರೆ ಅನುಭವಿಸುವ ನರಕ
ಕಲಿಯಲಿಚ್ಛಿಸುವವರ ಪಾಲಿಗವ ಸೇವಕ
ಆಶ್ರಯ ಬೇಡಿ ಬಂದವರಿಗವ ರಕ್ಷಕ.

ಕಗ್ಗಲ್ಲನ್ನು ಕೆತ್ತಲಿಚ್ಛಿಸುವ ಶಿಲ್ಪಿ ಶಿಕ್ಷಕ
ಒಳ್ಳೆ ಶಿಲೆಗೈಯಲು ಅರಸುವ ದಾರಿಗಳನೇಕ
ಮೂರ್ತಿ ಭಿನ್ನವಾಗಬಾರದೆಂಬ ಅವನ ಆತಂಕ
ಮುದ್ದಾಗಿ ಮೂಡಿದರೆ ಇವನ ಜನ್ಮ ಸಾರ್ಥಕ.

ನಿಮ್ಮ ಮನಸುಗಳೆಲ್ಲ ಒಳ್ಳೆಯವೆ
ಮನದಂಗಳದಲ್ಲಿ ಆಸೆಗಳು ನೂರಾರಿವೆ
ಆಸೆಗಳಿಗಿವೆ ಹಲವು ದಾರಿ
ಅತ್ತಿತ್ತ ಜಾರದಿರಿ, ಮುಟ್ಟುವವರೆಗೆ ಗುರಿ.

ನಿಮ್ಮನ್ನೆ ನಂಬಿಹರು ನಿಮ್ಮ ಮಾತಾ – ಪಿತರು
ನಿಮಗಾಗಿ ದುಡಿದು, ದಣಿಯುತಿಹರು
ಒಳ್ಳೆ ವಿದ್ಯೆಗೆಂದು, ನಮ್ಮ ಮಡಿಲಿಗಿಟ್ಟಿಹರು
ಹಾರೈಸುವವರ ಆಸೆಗಳನ್ನು ಪೂರೈಸಿ ನೀವೆಲ್ಲರೂ

ಓ ನಲ್ಮೆಯ ಮಕ್ಕಳೆ, ನಿಮ್ಮಿಂದ ನಿಮಗಿಂದು ವಿದಾಯ
ನಮ್ಮ ಶಾಲೆಗೆ ತನ್ನಿ ಕೀರ್ತಿಯಾ
ಆಗಾಗ ತರುತ್ತಿರಿ ಶುಭ ವಾರ್ತೆಯಾ,
ನಮ್ಮ ಕಾಲೇಜಿಗೆ ನೀವೆಲ್ಲಾ ಮರಳಿ ಬರ್ತೀರಾ?
ಬಂದು ಉಜ್ವಲಗೊಳಿಸಿ ಕಾಲೇಜಿನ ಘನತೆಯಾ.



**ಜೆ. ಉಮಾ**
ಶಿಕ್ಷಕರು, ಅಭಿನವ ಭಾರತಿ
ಪ್ರೌಢಶಾಲೆ,
ಕನ್ನಡ ಮಾಧ್ಯಮ, ಮಂಡ್ಯ.

# ಬದುಕು ಜಟಕಾ ಬಂಡಿ ವಿಧಿ ಅದರ ಸಾಹೇಬ

**ಕುದುರೆ ನೀನ್ ಅವನು ಪೇಳ್ದಂತೆ ಪಯಣಿಗನು**
**ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು**
**ಪದಕುಸಿಯೇ ನೆಲವಿಹುದು ಮಂಕುತಿಮ್ಮ ॥**

ಎಷ್ಟು ಅರ್ಥಗರ್ಭಿತ ಸಾಲುಗಳಿವು. ಮನುಷ್ಯ ತಾನು ಏನೋ ಸಾಧಿಸಿದ್ದೇನೆ ಏನೇನೋ ಮಾಡಿದ್ದೇನೆ ಎನ್ನುವ ಗರ್ವದಿಂದ ಎಷ್ಟೇ ಬೀಗಿದರು ಎಷ್ಟೇ ಮೆರೆದರೂ ಒಮ್ಮೆ ವಿಧಿ ತನ್ನ ಕೈಯಲ್ಲಿರುವ ಸೂತ್ರವನ್ನು ಕೈಬಿಟ್ಟರೆ ಅಂತಹವನು ಕೂಡ ನೆಲ ಕಚ್ಚಬೇಕು ಏಕೆಂದರೆ ಈ ಬದುಕು ನಾವಂದುಕೊಂಡಂತೆ ಇರುವುದಿಲ್ಲ ನಾವು ಹೊಂದಿಕೊಂಡಂತೆ ಇರುತ್ತದೆ. ಅಷ್ಟಲ್ಲದೆ ಹೇಳಿದ್ದಾರೆಯೇ 'ಈ ಭೂಮಿ ಬಣ್ಣದ ಬುಗುರಿ ಆ ಶಿವನೇ ಚಾಟಿ ಕಣೋ ಎಂದು?.'

ನಾವು ಎಷ್ಟೊಂದು ಸಲ ಅಂದುಕೊಳ್ಳುತ್ತೇವೆ ನಾವು ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು ಎಂದು. ಆದರೆ ಅದು ಹಲವಾರು ಬಾರಿ ಸುಳ್ಳಾಗುತ್ತದೆ. ಎಷ್ಟೆಷ್ಟೋ ಪ್ರಯತ್ನಗಳ ನಂತರವೂ ಇನ್ನೇನು ಕೈಗೆ ಸಿಕ್ಕಿತು ಎನ್ನುವಷ್ಟರಲ್ಲಿ ಕೈಜಾರಿ ಹೋಗಿರುತ್ತದೆ. ಅದೇ ವಿಧಿ ಇರಬಹುದು.

ಅದು ತೋರಿಸಿದ ದಾರಿಯಲ್ಲಿ ಅತೀ ಅಪೇಕ್ಷೆ ಇಲ್ಲದೆ ಬಂದ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುತ್ತಾ ನಾವು ಸಾಗಬೇಕಾಗುತ್ತದೆ. ಇಲ್ಲದಿದ್ದರೆ ಎಣ್ಣೆ ಬಂದಾಗ ಕಣ್ಣುಮುಂಚ್ಚಿಕೊಂಡರು ಎನ್ನುವಂತೆ ಆಗುತ್ತದೆ. ಎಣ್ಣೆಯನ್ನು ಧಿಕ್ಕರಿಸಿ ಕೇವಲ ಬತ್ತಿ ದೀಪಗಳಿಗೆ ಅರಸಿಕೊಂಡು ಕುಳಿತರೆ ಅವೆಲ್ಲವೂ ದೊರೆತಾಗ ದೀಪ ಬೆಳಗಲು ಎಣ್ಣೆಯೇ ಇಲ್ಲದಾಗಬಹುದು. ಆದ್ದರಿಂದ ಬಂದ ಒಳ್ಳೆಯ ಅವಕಾಶಗಳನ್ನು ಬಾಚಿಕೊಳ್ಳಬೇಕು.

ನಾವು 'ಎಲ್ಲವೂ ವಿಧಿಲಿಖಿತ 'ಎನ್ನುವ ಮಾತನ್ನು ಕೇಳಿಯೇ ಇದ್ದೇವೆ. ನಮ್ಮ ನಂಬಿಕೆಗಳ ಪ್ರಕಾರ ಇಂತಹವರಿಗೆ ಹೀಗೆಯೇ ಆಗಬೇಕೆಂದು ಮೊದಲೇ ನಿರ್ಧಾರವಾಗಿರುತ್ತದೆಯಂತೆ. ಆದ್ದರಿಂದ ಬದುಕು ಬಂದಕಡೆಗೆ ಧನಾತ್ಮಕ ಆಲೋಚನೆಗಳನ್ನು ಹೊತ್ತು ಸಾಗುವುದು ಬದುಕುವವರ ಲಕ್ಷಣ ಎನ್ನುವುದು ನನ್ನ ಅಭಿಪ್ರಾಯ.

ಹಾಗಾದರೆ ನಾವು ಯಾವ ಗುರಿಯನ್ನು ಇಟ್ಟುಕೊಳ್ಳಬಾರದೇ? ಎಂದು ನೀವು ಕೇಳಿದರೆ.

ಖಂಡಿತ ನಾನು ಜೀವನದಲ್ಲಿ ಗುರಿ ಇರಬೇಕು ಎನ್ನುತ್ತೇನೆ ಅದರೊಂದಿಗೆ ಮಾಹಾತ್ವಕಾಂಕ್ಷೆ ಇರಬೇಕು. ಅದನ್ನು ಸಾಧಿಸುವ ಪ್ರಯತ್ನ ಖಂಡಿತ ಬೇಕು. ಉದಾಹರಣೆಗೆ: ಅಲೆಕ್ಸಾಂಡರ್'ನ ಬಗೆಗೆ ನಾವು ಕೇಳಿಯೇ ಇರುತ್ತೇವೆ. ಅವನು ಬಾಲಕ ನಾಗಿದ್ದಾಗ ಅವನ ಹಸ್ತ ಮುದ್ರಿಕೆಯನ್ನು ನೋಡಿದ ಒಬ್ಬ ಜ್ಯೋತಿಷಿ ಅವನಿಗೆ ಹೇಳಿದರಂತೆ. 'ನೋಡು ಮಗು ನೀನು ದೊಡ್ಡ ಚಕ್ರವರ್ತಿಯಾಗಬೇಕಿತ್ತು ಆದರೆ ಒಂದೇ ಒಂದು ಗೆರೆ ನಿನ್ನ ಹಸ್ತದಲ್ಲಿ ಕಾಣುತ್ತಿಲ್ಲ ಆದ್ದರಿಂದ ಅದು ಸಾಧ್ಯವಿಲ್ಲ' ಎಂದರಂತೆ ಆಗ ಅವನು ತನ್ನ ಹತ್ತಿರ ಇದ್ದ ಒಂದು ಕತ್ತಿಯಿಂದ ತನ್ನ ಹಸ್ತದ ಮೇಲೆ ಗೆರೆ ಮೂಡಿಸಿಕೊಂಡು ಅವರನ್ನು ಕೇಳಿದನಂತೆ 'ನೋಡಿ ಈಗ ಅದು ಸಾಧ್ಯವೇ?' ಎಂದು. ಅವನ ಕೈಯಲ್ಲಿ ಚಿಮ್ಮುತ್ತಿದ್ದ ರಕ್ತವನ್ನು ಕಂಡ ಅವರು ಹೇಳಿದರಂತೆ 'ನಿನ್ನನ್ನು ಚಕ್ರವರ್ತಿಯಾಗುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ನೀನು ಮುಂದೆ ಸಾಗು ಎಂದರಂತೆ. ನಂತರ ಅಲೆಕ್ಸಾಂಡರ್ ಇಡೀ ವಿಶ್ವದಲ್ಲಿ ಹೇಗೆ ಮೆರೆದ ಎನ್ನುವುದು ಎಲ್ಲರಿಗು ತಿಳಿದಿದೆ. ಅಂದರೆ ನಮಗೆ ವಿಧಿ ಇಂತಹದ್ದು ಎಂದು ಬರೆದಿದ್ದರು ಅದನ್ನು ಸಾಧಿಸಬೇಕಾದರೆ ನಮ್ಮ ಪ್ರಾಮಾಣಿಕ ಪ್ರಯತ್ನ ಬಹಳ ಮುಖ್ಯವಾಗುತ್ತದೆ.



**ಶ್ರೀಮತಿ ಶೋಭಾ ನಾಗಭೂಷಣ್**
**ಶಿಕ್ಷಕಿ ಹಾಗೂ ಕವಯಿತ್ರಿ ಮೈಸೂರು**

# ಯುಗಾದಿ ಸಂಭ್ರಮ



ಯುವ ಹೃದಯದ ನವ ಚೈತನ್ಯ ಚಿತ್ತಾರ
ಗಾಂಧಾರ ಗಾಯನ ಭ್ರಮರ ಜೇಂಕಾರ
ದಿನ್ನ ದಿಂನ್ದಿನ್ನ ನರ್ತನ ಸತ್ಕಾರ
ಬೇವು ಬೆಲ್ಲದ ಸಮಾಗಮ ಹಸಿರ ಮಲ್ಲಾರ

ಕೃತ, ತ್ರೇತ, ದ್ವಾಪರ, ಕಲಿಯುಗ
ಕಳೆಯುತಲಿವೆ ಮನ್ವಂತರಗಳ ಯುಗ
ವರುಷ ವರುಷವು ವಸಂತಾನಾ ಗಮನದ ಯೋಗ
ಮರೆತೇವೆ, ಚಿಗುರೊಡೆಯುವ ಸಸ್ಯ ಶ್ಯಾಮಲೆಯ ಭೋಗ


ಪಚ್ಚೆಯೊಡವೆಯ ಒಡಲ ಶೃಂಗಾರ
ಪನ್ನೀರ ಸಂಚನವೀಯುವ ವರ್ಷಧಾರ
ನವವಧುವಿಗೆ ಬಣ್ಣಬಣ್ಣದ ಹೋಗಳ ಶೃಂಗಾರ
ಮೈಮರೆಸುವ ಮಲ್ಲಿಗೆಯ ಸುಗಂಧ ಸುಮಧುರ

ಒಣಗಿದ ಮರಗಳ ಗರ್ಭದುಡಲು
ಚಿಗುರೊಡೆಯುವ ಸೊಬಗಿನ ಕವಲು
ಸಂಭ್ರಮ ಮೂಡಿಸುವ ಮನಸ್ಸಿನ ಮಜಲು
ಬನದೇವಿಯ ಸೀಮಂತ ತುಂಬಿದ ಮಡಿಲು
ಭುವಿಗೆ ನವವಸಂತನ ಆಗಮನ
ಎಳೆ ಚಿಗುರುಗಳ ನೋಡುವ ಕಣ್ಮನ
ನವಿರಾದ ಬೆರಳುಗಳಿಂದ ಮೀಟುವ ವೀಣಾವಾದನ
ಕೋಗಿಲೆಯ ಕುಹು ಕುಹೂ ಸುಮಧುರ ಗಾಯನ
ಜೇನಗುಂಜನಕೆ ಮನಹಿಗ್ಗಿ ಅರಳುವ ಹೂವ ವರುಷ
ಸಾರಹೀರಿ ನಲಿದು ಗೂಡಿಗೋಯ್ವ ಜೇನ ಸರಸ
ಮಾವಿನ ತಳಿರ ತೋರಣದ ಸಂತಸ
ಇದುವೇ ನೋಡಿ ಯುಗಾದಿಯ ಸಂಭ್ರಮ

–ಶ್ರೀಮತಿ ವಿಜಯ ಲಕ್ಷ್ಮಿ ಗೋಪಾಲ್
ಕೊಡಿಯಾಲ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ.

# ಪ್ರೊ.ಜಿ.ಎಸ್.ಸಿದ್ದಲಿಂಗಯ್ಯ

ಜಿ.ಎಸ್.ಸಿದ್ದಲಿಂಗಯ್ಯನವರು ಹುಟ್ಟಿದ್ದು ಫೆಬ್ರವರಿ 1931 ರಲ್ಲಿ. ತುಮಕೂರು ಜಿಲ್ಲೆಯ ಬೆಳ್ಳಾವೆ ಗ್ರಾಮ ಅವರ ಹುಟ್ಟೂರು. ವಿದ್ಯಾಭ್ಯಾಸ ತುಮಕೂರು ಮತ್ತು ಮೈಸೂರುಗಳಲ್ಲಾಯಿತು. ಕನ್ನಡ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದ ಇವರು ಪ್ರಾಧ್ಯಾಪಕರಾಗಿ ಪ್ರಾಂಶುಪಾಲರಾಗಿ ಕೊನೆಗೆ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರಾಗಿ ನಿವೃತ್ತರಾದರು. ವಿದ್ವಾಂಸರಾದ ಸಿದ್ದಲಿಂಗಯ್ಯನವರು ಬೆಂಗಳೂರು ಮೈಸೂರು, ಕರ್ನಾಟಕ, ಮಂಗಳೂರು, ಮುಂಬೈವಿಶ್ವವಿದ್ಯಾಲಯಗಳ ವಿಚಾರ ಸಂಕೀರ್ಣಗಳಲ್ಲಿ ಅನೇಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಕವಿಗೋಷ್ಠಿ ಹಾಗೂ ವಿದ್ವತ್ ಗೋಷ್ಠಿಗಳ ಅಧ್ಯಕ್ಷತೆಯನ್ನು ವಹಿಸಿದ್ದಾರೆ. ಮಹಾನುಭಾವ ಬುದ್ಧ, ಬಸವಣ್ಣ, ವಿರತಿಯಸಿರಿ ಸಣ್ಣಪ್ಪನವರು, ಡಾ.ಸಿದ್ದಯ್ಯ ಪುರಾಣಿಕ– ಇವು ಇವರು ರಚಿಸಿರುವ ಜೀವನ ಚರಿತ್ರೆಗಳು.



ಕವಿ ಲಕ್ಷ್ಮೀಶ, ಚಾಮರಸ, ಹೊಸಗನ್ನಡಕಾವ್ಯ, ರತ್ನಾಕರವರ್ಣಿ, ವಚನಸಾಹಿತ್ಯ: ಒಂದು ಇಣುಕುನೋಟ, ವಚನ ವಾಙ್ಮಯ ಮತ್ತು ಭಾಷೆ, ಹರಿದಾಸ ಸಾಹಿತ್ಯ ಪರಂಪರೆ, ಶೂನ್ಯಸಂಪಾದನೆ–ಒಂದು ಮರುಚಿಂತನೆ, ವಿಮರ್ಶೆಯ ಕೃತಿಗಳು ಶೂನ್ಯಸಂಪಾದನೆಗಳು–ಒಂದು ಅವಲೋಕ, ಇವರ ಮಹತ್ವದ ವಿಮರ್ಶಾಗ್ರಂಥ ಬಿಂದುವಿನಿಂದ, ಎಂಬುದು ಚಿಂತನೆಗಳ ಸಂಕಲನ. ಕವಿ, ವಿಮರ್ಶಕ, ವಿದ್ವಾಂಸ, ವಾಗ್ಮಿ, ದಕ್ಷ ಆಡಳಿತಗಾರ– ಹೀಗೆ ಪ್ರೊ.ಜಿ.ಎಸ್.ಸಿದ್ದಲಿಂಗಯ್ಯನವರು ಬಹುಮುಖ ಪ್ರತಿಭೆಯುಳ್ಳವರು 1989 ರಿಂದ ಮೂರು ವರ್ಷಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಇವರು ನಿರ್ವಹಿಸಿದ ಸೇವೆ ಅವಿಸ್ಮರಣೀಯ.